ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

# ಸ್ವಾಭಿಮಾನಿ ಸಹಕಾರಿ

# Swabhimani Sahakari

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

Volume - 12
Issue - 11
Pages - 28
₹ - 12
November - 2015




▸▸ ಸೌಹಾರ್ದ ಸಹಕಾರಿಗಳ ಸಂಖ್ಯೆ : 3339 ▸▸ 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 859



# ಸೌಹಾರ್ದ ಸಹಕಾರಿಗಳು ಸಾಮರ್ಥ್ಯ ಹೆಚ್ಚಿಸಿಕೊಳ್ಳಲಿ, ಶಕ್ತಿವಂತರಾಗಲಿ, ಕ್ರಿಯಾಶೀಲತೆ ಹೆಚ್ಚಲಿ

ಕನ್ನಡ ರಾಜ್ಯೋತ್ಸವ, ದೀಪಾವಳಿ, ಗುರುನಾನಕ ಜಯಂತಿ, ಹುತ್ತರಿ ಹಬ್ಬ, ಕನಕದಾಸ ಜಯಂತಿಗಳ ಆಚರಣೆಯ ಅಂಗವಾಗಿ ರಾಜ್ಯದ ಸಮಸ್ತ ಸಹಕಾರಿ ಬಂಧುಗಳಿಗೆ ಶುಭಾಷಯಗಳು. ವಿಶೇಷವಾಗಿ ದೀಪಗಳ ಹಬ್ಬ ದೀಪಾವಳಿ. ಅಜ್ಞಾನವೆಂಬ ಕತ್ತಲೆಯಿಂದ ಜ್ಞಾನವೆಂಬ ಬೆಳಕಿನ ಕಡೆಗೆ ಹೆಜ್ಜೆ ಹಾಕುವ ಪರ್ವಕಾಲದ ಸಂದರ್ಭದಲ್ಲಿ ಎಲ್ಲರ ಬಾಳಿನಲ್ಲಿ ಉತ್ತರೋತ್ತರ ಅಭಿವೃದ್ಧಿಯನ್ನು ಹಾರೈಸುತ್ತೇನೆ.

ಇತ್ತೀಚೆಗೆ ಮೈಸೂರು ಮತ್ತು ಬೆಂಗಳೂರು ವಿಭಾಗೀಯ ಸಮಾವೇಶಗಳನ್ನು ಜರುಗಿಸುವ ಪೂರ್ವಭಾವಿಯಾಗಿ ರಾಜ್ಯದಾದ್ಯಂತ ಎಲ್ಲಾ ಜಿಲ್ಲೆಗಳಲ್ಲಿ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕರ ಸಭೆಗಳನ್ನು ಜರುಗಿಸಲಾಗಿದೆ. ಈ ಸಭೆಗಳಲ್ಲಿ ಸೌಹಾರ್ದ ಸಹಕಾರಿಗಳ ಭಾಗವಹಿಸುವಿಕೆ ತೃಪ್ತಿದಾಯಕ ಹಾಗೂ ಅಭಿನಂದನೀಯ. ಸೌಹಾರ್ದ ಸಹಕಾರಿಗಳ ಸಮಸ್ಯೆಗಳ ಬಗ್ಗೆ ತಿಳಿಯುವ, ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರಗತಿಯನ್ನು ತಿಳಿಸುವ ಮತ್ತು ಸಹಕಾರಿ ಪರಿಸರವನ್ನು ಅಧ್ಯಯನ ಮಾಡುವ ಅವಕಾಶ ಇದಾಗಿತ್ತು.

ಈ ಸಂಪರ್ಕ ಸಭೆಗಳಲ್ಲಿ ಸೌಹಾರ್ದ ಸಹಕಾರಿಗಳು ತಮ್ಮ ಸಾಮರ್ಥ್ಯ ಹೆಚ್ಚಿಸಿಕೊಳ್ಳಲು, ಹೆಚ್ಚು ಶಕ್ತಿವಂತರಾಗಲು ಅವರಲ್ಲಿ ಹುಮ್ಮಸ್ಸು ಹೆಚ್ಚಿಸುವುದು. ಅವರ ಶಕ್ತಿ ಸಾಮರ್ಥ್ಯಗಳ ಅರಿವು ಮಾಡಿಕೊಡುವುದು ಮತ್ತು ಈ ಕಾರ್ಯನಿರ್ವಹಣೆಗಾಗಿ ಮಾರ್ಗದರ್ಶನ ನೀಡುವುದು. ಶಕ್ತಿ ಸಾಮರ್ಥ್ಯ ಎಂದರೆ ಸಹಕಾರ ತತ್ವಗಳ ಅನುಷ್ಠಾನ, ಸಂಪನ್ಮೂಲಗಳ ಸಂಗ್ರಹ ವ್ಯವಸ್ಥೆ, ಹಣಕಾಸು ನಿರ್ವಹಣೆ, ಆಡಳಿತ ವ್ಯವಸ್ಥೆ ನಿರ್ವಹಣೆ, ಮಾನವ ಸಂಪನ್ಮೂಲ ನಿರ್ವಹಣೆ, ವ್ಯವಹಾರಗಳ ನಿರ್ವಹಣೆ, ಕಾನೂನುಗಳ ಪರಿಪಾಲನೆ, ಲೆಕ್ಕಪತ್ರಗಳ ನಿರ್ವಹಣೆ, ಲೆಕ್ಕಪರಿಶೋಧನೆ, ಪರಿಸರ ನಿರ್ವಹಣೆ, ಶಿಕ್ಷಣ ಮತ್ತು ತರಬೇತಿ ನಿರ್ವಹಣೆ, ಮಾನವೀಯ ಮೌಲ್ಯಗಳ ಆಂತರಿಕ ಸಂಬಂಧಗಳ ನಿರ್ವಹಣೆ ಈ ಎಲ್ಲಾ ವಿಷಯಗಳ ಬಗ್ಗೆ ಅರಿವು ಮೂಡಿಸುವುದು ಆಗಿತ್ತು. ಸಭೆಗಳಲ್ಲಿ ಭಾಗವಹಿಸಿದ ಪ್ರತಿನಿಧಿಗಳು ಸಕ್ರಿಯವಾಗಿ ಭಾಗವಹಿಸಿ, ತಮ್ಮ ವಿಚಾರ ವಿನಿಮಯ ಮಾಡುವುದರ ಜೊತೆಗೆ ಬೇರೆ ಸಹಕಾರಿಗಳ ಕಾರ್ಯಚಟುವಟಿಕೆಗಳನ್ನು ಅಧ್ಯಯನ ಮಾಡಲು ಅವಕಾಶವಾಗಿದೆ ಎಂದು ತಿಳಿಸಿ, ಇಂತಹ ಸಭೆಗಳನ್ನು ಆಗಿಂದ್ದಾಗ್ಗೆ ವ್ಯವಸ್ಥೆ ಮಾಡಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿರುವುದು ಸಂತೋಷಕರ ಹಾಗೂ ಸ್ವಾಗತಾರ್ಹ.

ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳ ಬೆಳವಣಿಗೆಯ ವೇಗ ನಾಗಾಲೋಟದಲ್ಲಿದೆ. ವಿಶೇಷವಾಗಿ ಯುವಕರು, ಮಹಿಳೆಯರು ಈ ಕ್ಷೇತ್ರಕ್ಕೆ ಆಕರ್ಷಿತರಾಗಿದ್ದಾರೆ. ರಾಜ್ಯದಲ್ಲಿ ಹೊಸದಾಗಿ ನೋಂದಣಿಯಾಗುವುದೆಲ್ಲಾ ಸೌಹಾರ್ದ ಸಹಕಾರಿ ಸಂಸ್ಥೆಗಳು ಎಂಬುವ ವದಂತಿಯನ್ನು ಸತ್ಯವಾಗಿಸಬೇಕಾದರೆ, ಪ್ರತಿಯೊಂದು ಸೌಹಾರ್ದ ಸಹಕಾರಿಯು ಮತ್ತೊಂದು ಸೌಹಾರ್ದ ಸಹಕಾರಿಯನ್ನು ಪ್ರಾರಂಭಿಸುವಲ್ಲಿ ಯಶಸ್ವಿಯಾಗಬೇಕು. ಅದಕ್ಕಾಗಿ ನಮ್ಮ ಸಾಮರ್ಥ್ಯ, ಶಕ್ತಿಯನ್ನು ಹೆಚ್ಚಿಸಿಕೊಳ್ಳುವುದು ಅಗತ್ಯ. ಈ ಪ್ರಕ್ರಿಯೆಯಲ್ಲಿ ತಾವುಗಳೆಲ್ಲ ಭಾಗಿಗಳಾಗಲು ಸಂಯುಕ್ತ ಸಹಕಾರಿಯು ಆಶಿಸುತ್ತದೆ.

> “ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳ ಬೆಳವಣಿಗೆಯ ವೇಗ ನಾಗಾಲೋಟದಲ್ಲಿದೆ. ವಿಶೇಷವಾಗಿ ಯುವಕರು, ಮಹಿಳೆಯರು ಈ ಕ್ಷೇತ್ರಕ್ಕೆ ಆಕರ್ಷಿತರಾಗಿದ್ದಾರೆ. ರಾಜ್ಯದಲ್ಲಿ ಹೊಸದಾಗಿ ನೋಂದಣಿಯಾಗುವುದೆಲ್ಲಾ ಸೌಹಾರ್ದ ಸಹಕಾರಿ ಸಂಸ್ಥೆಗಳು ಎಂಬುವ ವದಂತಿಯನ್ನು ಸತ್ಯವಾಗಿಸ'ಬೇಕಾದರೆ, ಪ್ರತಿಯೊಂದು ಸೌಹಾರ್ದ ಸಹಕಾರಿಯು ಮತ್ತೊಂದು ಸೌಹಾರ್ದ ಸಹಕಾರಿಯನ್ನು ಪ್ರಾರಂಭಿಸುವಲ್ಲಿ ಯಶಸ್ವಿಯಾಗಬೇಕು.”

▸▸ **ಗುರುನಾಥ ಜಾಂತಿಕರ,** ಅಧ್ಯಕ್ಷರು

## ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಗುರುನಾಥ ಜಾಂತಿಕರ
ಗೌರವ ಅಧ್ಯಕ್ಷರು

ಶ್ರೀ ಹೆಚ್.ವಿ.ರಾಜೀವ
ಗೌರವ ಉಪಾಧ್ಯಕ್ಷರು

ಶ್ರೀ ಎಸ್.ಆರ್.ಸತೀಶಚಂದ್ರ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ. ಪಾಟೀಲ್
ಸಂಪಾದಕರು

ಶ್ರೀ ವಿ.ಜೆ.ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು


## ಒಳ ಪುಟಗಳಲ್ಲಿ . . .


62ನೇ ಅಖಿಲ ಭಾರತ ಸಹಕಾರ ಸಪ್ತಾಹ – 2015 ಆಚರಿಸುವ ಕುರಿತು ........ 4

ಸಂಯುಕ್ತ ಸಹಕಾರಿಯ ನಿವೇಶನದಲ್ಲಿ ಭೂಮಿ ಪೂಜೆ ಹಾಗೂ ಶಿಲಾನ್ಯಾಸ ........ 6

ಸಹಕಾರ ಒಂದು ಸಂಸ್ಕಾರ : ಸಮಾಜದ ಅಭಿವೃದ್ಧಿಗೆ ಸಹಕಾರಿಗಳ ಕೊಡುಗೆ ಅಪಾರ – ಸ್ವಾಮಿ ಅಭಯಾನಂದ ಮಹಾರಾಜ, ರಾಮಕೃಷ್ಣ ಆಶ್ರಮ ಯಲಹಂಕ ........ 8

ವಿವಿಧ ಜಿಲ್ಲೆಗಳಲ್ಲಿ ಪತ್ರಿಕಾ ಗೋಷ್ಠಿ ಹಾಗೂ ಸಂಪರ್ಕ ಸಭೆಗಳು ..... 9

ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರತಿಷ್ಠಿತ ಸಹಕಾರಿ ಶ್ರೀ ಅರಿಹಂತ ಕ್ರೆಡಿಟ್ ಸೌಹಾರ್ದ ಸಹಕಾರಿ, ಬೋರಗಾಂವ ಬೆಳ್ಳಿಹಬ್ಬ ........ 11

ಕಲಬುರಗಿ, ಯಾದಗಿರಿ ಹಾಗೂ ಬೀದರ್ ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರಿಗಾಗಿ "ಕ್ರಿಯಾ ಯೋಜನೆ ಸಭೆ" ........ 12

ಹೊಸ ಸೌಹಾರ್ದ ಸಹಕಾರಿಗಳಿಗಾಗಿ "ಪ್ರವೇಶ ತರಬೇತಿ" ಕಾರ್ಯಕ್ರಮ ........ 13

ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ–ಆಪರೇಟಿವ್‌ನ ಚಿತ್ರದುರ್ಗ ಶಾಖೆಯ ಸ್ಥಳಾಂತರದ ಸಮಾರಂಭ ........ 14

ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ ಸಹಕಾರಿಯ ಸಿಬ್ಬಂದಿಗಳಿಗಾಗಿ ತರಬೇತಿ ಕಾರ್ಯಾಗಾರ ........ 18

ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ಪ್ರಾರಂಭ ........ 19

ಸಹಕಾರಿ ಕ್ಷೇತ್ರದಲ್ಲಿ ಪರಿಣಾಮಕಾರಿ ನಾಯಕತ್ವ : ಭಾಗ–1 ನಾಯಕತ್ವ ........ 22

ಸೌಹಾರ್ದ ಸಹಕಾರಿಗಳಿಗೆ ಬದಲಾಗುತ್ತಿರುವ ವ್ಯವಹಾರ ಮಾರುಕಟ್ಟೆಯ ಜ್ಞಾನದ ಮಹತ್ವ ........ 25

RBI NEWS - OCTOBER 2015 ........ 27


# ಸಂಪಾದಕೀಯ

## ಸೌಹಾರ್ದ ಸಹಕಾರಿಗಳ ವ್ಯಾಜ್ಯಗಳ ವಿಲೇವಾರಿಗಾಗಿ ಪ್ರತ್ಯೇಕ ನ್ಯಾಯಾಲಯ - ಸೌಹಾರ್ದ ಸಹಕಾರಿಗಳ ಹೆಚ್ಚಿದ ಜವಾಬ್ದಾರಿ

ಕರ್ನಾಟಕ ರಾಜ್ಯ ಸರಕಾರ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ವ್ಯಾಜ್ಯಗಳ ವಿಲೇವಾರಿಗಾಗಿ ಪ್ರತ್ಯೇಕ ನ್ಯಾಯಾಲಯವವನ್ನು ಮಂಜೂರು ಮಾಡಿರುವುದು ಸಂತೋಷದ ವಿಷಯ. ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಹಾಗೂ ಉತ್ತಮ ಗುಣಮಟ್ಟ ನಿರ್ವಹಣೆಗೆ ಪೂರಕವಾಗುತ್ತದೆ. ಇದಕ್ಕಾಗಿ ಸಹಕಾರ ಇಲಾಖೆ ಹಾಗೂ ರಾಜ್ಯ ಸರಕಾರಕ್ಕೆ ಸಂಯುಕ್ತ ಸಹಕಾರಿಯು ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಪ್ರತ್ಯೇಕ ನ್ಯಾಯಾಲಯ ಮಂಜೂರಿಯಿಂದಾಗಿ ಸೌಹಾರ್ದ ಸಹಕಾರಿಗಳಿಗೆ ಜವಾಬ್ದಾರಿ ಹೆಚ್ಚಾಗಿದೆ. ರಾಜ್ಯದ ಪ್ರಸ್ತುತ 3500ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳಲ್ಲಿ ಶೇಕಡಾ 80ರಷ್ಟು ಸಹಕಾರಿಗಳು ಹಣಕಾಸಿನ ವ್ಯವಹಾರವನ್ನೇ ಮಾಡುತ್ತಿರುವುದರಿಂದ ಮುಂಬರುವ ದಿನಗಳಲ್ಲಿ ಸಾಲ ವಸೂಲಾತಿಯ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಈ ವ್ಯವಸ್ಥೆಯನ್ನು ಉಪಯೋಗಿಸಿಕೊಳ್ಳುವುದು ಅನಿವಾರ್ಯವಾಗುತ್ತದೆ.

ಈ ವ್ಯವಸ್ಥೆಯನ್ನು ಪ್ರಾರಂಭಿಸುವುದಕ್ಕಾಗಿ ಸರಕಾರ ಪ್ರಸ್ತಾವನೆಯನ್ನು ಸಿದ್ಧಪಡಿಸಿದೆ. ಈ ಪ್ರಸ್ತಾವನೆಯ ಪ್ರಕಾರ ಇಲಾಖೆಯ ಒಬ್ಬರು ಜಂಟಿ ನಿಬಂಧಕರು ಮತ್ತು ಒಬ್ಬರು ಸಹಾಯಕ ನಿಬಂಧಕರು ಮತ್ತು ಅಗತ್ಯ ಸಿಬ್ಬಂದಿಯನ್ನು ಹೊಂದಿರುತ್ತದೆ. ಪ್ರತ್ಯೇಕ ಕಛೇರಿ ವ್ಯವಸ್ಥೆ ಮಾಡಬೇಕಿದೆ.

ರಾಜ್ಯದ ಸೌಹಾರ್ದ ಸಹಕಾರಿಗಳು ಈ ಬಗ್ಗೆ ತುರ್ತು ಕ್ರಮವಿಡಬೇಕಿದೆ. ತಮ್ಮಲ್ಲಿಯ ಬಾಕಿಯಾದ ಸಾಲದ ವಿವರ, ನ್ಯಾಯಾಲಯದಲ್ಲಿ ಈಗಾಗಲೇ ವ್ಯಾಜ್ಯ ದಾಖಲಿಸಿರುವ ಪ್ರಕರಣಗಳ ವಿವರ ಮತ್ತು ದಾವಾ ಡಿಕ್ರಿಯಾಗಿರುವ ಪ್ರಕರಣಗಳ ವಿವರಗಳನ್ನು ಸಂಯುಕ್ತ ಕಛೇರಿಗೆ ಕಳುಹಿಸಿ, ಸಹಕರಿಸುವುದು ಅಗತ್ಯ. ಈಗಾಗಲೇ ಸಂಯುಕ್ತ ಸಹಕಾರಿ ತಮಗೆ ಪತ್ರಗಳನ್ನು ಕಳುಹಿಸಿದೆ. ಈ ವಿವರಗಳನ್ನು ಸಲ್ಲಿಸುವ ಬಗ್ಗೆ ಒಂದು ಮಾದರಿಯನ್ನು ಕಳುಹಿಸಿದೆ. ಈ ವಿವರಗಳು ಬಂದ ನಂತರ ಪ್ರಸ್ತಾವನೆಯನ್ನು ಕಳುಹಿಸಿ, ನ್ಯಾಯಾಲಯ ಕಾರ್ಯಾರಂಭಕ್ಕೆ ಕ್ರಮವಿಡಲಾಗುವುದು. ಪ್ರಕರಣದ ಆಧಾರದ ಮೇಲೆ ಈ ಪೀಠ ಬೆಳಗಾವಿ, ಕಲಬುರ್ಗಿ ಹಾಗೂ ಮೈಸೂರು ವಿಭಾಗಗಳಲ್ಲಿ ಕಾರ್ಯನಿರ್ವಹಿಸುವುದು.

ಸೌಹಾರ್ದ ಸಹಕಾರಿಗಳಲ್ಲಿನ ವ್ಯಾಜ್ಯಗಳ ಶೀಘ್ರ ವಿಲೇವಾರಿಗಾಗಿ ಸಂಯುಕ್ತ ಸಹಕಾರಿ ಈ ವ್ಯವಸ್ಥೆಯ ಪ್ರಾರಂಭಕ್ಕೆ ಕ್ರಮವಿಡುತ್ತದೆ. ಇದನ್ನು ಸರಿಯಾಗಿ ಉಪಯೋಗಿಸುವುದು ಸೌಹಾರ್ದ ಸಹಕಾರಿಗಳ ಜವಾಬ್ದಾರಿ. ■

## ನಮ್ಮ ಆಸ್ತಿ – ನಮ್ಮ ಬದುಕು

'ಭಗವದ್ಗೀತೆ' ಈ ದೇಶ ಜಗತ್ತಿಗೆ ಕೊಟ್ಟ ಆಧ್ಯಾತ್ಮಿಕ ಮಹತ್ವದ ಕೃತಿ. ಅಲ್ಲಿ ಸುಂದರವಾದ ಮಾತುಗಳಿವೆ. ಆ ಮಾತುಗಳಲ್ಲೆಲ್ಲಾ ಅನುಭವದ ಅಮೃತವಿದೆ. ಜ್ಞಾನದ ಬೆಳಕಿದೆ. ಮನಸ್ಸನ್ನು ಎತ್ತರಿಸುವ, ಮನಸ್ಸನ್ನು ಶುಚಿಗೊಳಿಸುವ, ಮನಸ್ಸನ್ನು ವಿಕಾಸಗೊಳಿಸುವ ಮಾತುಗಳಿವೆ. ಆ ಮಾತುಗಳಿಗೆ ಅಂಥ ಶಕ್ತಿ ಇದೆ. ಆದ್ದರಿಂದ ಅದನ್ನು 'ಮಹತ್ ಕೃತಿ' ಎಂದು ಕರೆಯಲಾಗುತ್ತದೆ. ಸಾವಿರ ಸಾವಿರ ಜನರಿಗೆ ಸುಖ ಕೊಟ್ಟ ಗ್ರಂಥ ಅದು. ವ್ಯಾಸ ಮುನಿಗಳಿಂದ ಮೂಡಿಬಂದ ಅನುಭವದ ಮಾತುಗಳವು. ಆದ್ದರಿಂದ ಅದನ್ನು 'ಗೀತಾ' ಎಂದು ಕರೆಯುವುದು.




ಅದೊಂದು 'ಹಾಡು'. ಅನುಭವದ ಮಾತುಗಳು ಹಾಡಾಗಿ ಹರಿದಿವೆ. ಗ್ರಂಥಗಳನ್ನು ಬರೆಯೋದಲ್ಲ, ಹರಿದು ಬರಬೇಕು. ಬುದ್ಧ, ಮಹಾವೀರ, ದಾಸರ ಮಾತುಗಳು ಹರಿದು ಬಂದಿವೆ. ಹೀಗಾಗಿ ಅವು ನಮಗೆ ಸುಖ ನೀಡುತ್ತವೆ. ಮಾತಿನ ರೂಪದಲ್ಲಿ ಜ್ಞಾನವನ್ನು, ಮನಸ್ಸಿಗೆ ಶಾಂತಿಯನ್ನು ನೀಡುತ್ತವೆ. ಅವು ಮಾಂತ್ರಿಕ ಮಾತುಗಳು. ಮಾತಿನ ರೂಪದ ಗೀತೆಗಳು. ಯಾವ ಮಾತುಗಳನ್ನು ಕೇಳಿದರೆ ಮನಸ್ಸು ವಿಕಾಸವಾಗುತ್ತದೋ ಅವು ಮಂತ್ರ, ಗೀತಾ, ಹಾಡು ಎಂದು ಕರೆಸಿಕೊಳ್ಳುತ್ತವೆ.

ಸೂರ್ಯ ತನ್ನ ಬೆಳಕಿನ ಕಿರಣಗಳನ್ನು ಹೂವುಗಳ ಮೇಲೆ ಚೆಲ್ಲುತ್ತಾನೆ. ಬೆಳಕಿನ ಕಿರಣಗಳಿಂದ ಹೂವು ಅರಳುತ್ತವೆ. ಆ ಕಿರಣಗಳು ಹೂವನ್ನು ಮುಟ್ಟಿತೋ ಇಲ್ಲವೋ.... ಅನ್ನುವ ಹಾಗೆ ಮೃದುವಾಗಿ ಸ್ಪರ್ಶಿಸುತ್ತವೆ. ಆ ಸ್ಪರ್ಶದಿಂದಲೇ ಹೂವು ಅರಳುತ್ತದೆ. ಅದೊಂದು ಮಾಂತ್ರಿಕ ಶಕ್ತಿ. ನಮ್ಮ ಕೈಯಲ್ಲಿ ಹೂವಿನ ಮೊಗ್ಗನ್ನು ಅರಳಿಸುವುದಕ್ಕೆ ಆಗುತ್ತದೇನು? ಕೈಯಲ್ಲಿ ಒಂದು ಸಾಧನ ಹಿಡಿದು ಎಷ್ಟೇ ನಯವಾಗಿ ಬಿಡಿಸುವುದಕ್ಕೆ ಪ್ರಯತ್ನಿಸಿದರೂ ಹೂವು ಹರಿದು ಹೋಗುತ್ತದೆ. ಆದರೆ ಸೂರ್ಯನ ಕಿರಣಗಳು ಹೂವಿನೊಳಗೆ ಕಾವು ಕೊಡುತ್ತದೆ. ಆ ಕಾವು ಹಿತವಾಗಿ ಮೊಗ್ಗು ಅರಳುತ್ತದೆ. ಹಾಗೇ ಬಲ್ಲವರ ಮಾತುಗಳು ಮನಸ್ಸನ್ನು ಅರಳಿಸುತ್ತವೆ. ಆ ಮಾತುಗಳು ಕಿವಿಯ ಮೂಲಕ ಮನಸ್ಸಿಗೆ ಸೇರಿ ಕಾವು ಕೊಡುತ್ತವೆ. ಆ ಮಾತುಗಳಲ್ಲಿ ಮಂತ್ರಶಕ್ತಿ ಇದೆ. ಆ ಮಾತುಗಳಿಂದ ಮನಸ್ಸು ವಿಕಾಸವಾಗುತ್ತದೆ. ವಿಸ್ತಾರವಾಗುತ್ತದೆ.

## 62ನೇ ಅಖಿಲ ಭಾರತ ಸಹಕಾರ ಸಪ್ತಾಹ – 2015 ಆಚರಿಸುವ ಕುರಿತು



ಸಹಕಾರ ಕ್ಷೇತ್ರದ ಅಭಿವೃದ್ಧಿಗಾಗಿ, ಸಹಕಾರ ಕ್ಷೇತ್ರದಲ್ಲಿ ಹೆಚ್ಚು ಹೆಚ್ಚು ಜನರನ್ನು ವಿಶೇಷವಾಗಿ ಮಹಿಳೆಯರನ್ನು, ಹಿಂದುಳಿದ ವರ್ಗದವರನ್ನು, ಯುವಕರನ್ನು ಬರಮಾಡಿಕೊಂಡು, ಅವರುಗಳಿಗೆ ಸಹಕಾರ ಕ್ಷೇತ್ರದ ಕಾರ್ಯನಿರ್ವಹಣೆಯ ಬಗ್ಗೆ ಮಾಹಿತಿಯನ್ನು ಕೊಡುವುದಕ್ಕಾಗಿ ಹಾಗೂ ಸಹಕಾರ ಕ್ಷೇತ್ರದ ಇದುವರೆಗಿನ ಪ್ರಗತಿಯ ವಿವರಗಳನ್ನು, ಸಾಧನೆಗಳನ್ನು ತಿಳಿಯಪಡಿಸುವ ಉದ್ದೇಶದಿಂದ ಪ್ರತಿ ವರ್ಷ ನವೆಂಬರ್ 14 ರಿಂದ 20ರವರೆಗೆ ಸಹಕಾರ ಸಪ್ತಾಹವನ್ನು ಆಚರಿಸಲಾಗುತ್ತಿದೆ. ನವೆಂಬರ್ 14 ನಮ್ಮ ದೇಶದ ಪ್ರಥಮ ಪ್ರಧಾನಿ ಪಂಡಿತ ಜವಾಹರಲಾಲ್ ನೆಹರೂರವರ ಜನ್ಮ ದಿನ. ದಿ.ನೆಹರೂರವರು ಸಹಕಾರ ಚಳುವಳಿಯ ಮೂಲಕ ಭಾರತವನ್ನು ಕಾಮನವೆಲ್ತ್ ರಾಷ್ಟ್ರ ನಿರ್ಮಾಣದ ಕನಸನ್ನು ಕಂಡಿದ್ದವರು. ಅವರು ಸಹಕಾರ ಕ್ಷೇತ್ರಕ್ಕೆ ಅತಿ ಹೆಚ್ಚಿನ ಪ್ರೋತ್ಸಾಹವನ್ನು ನೀಡಿದ್ದವರು.

ಪ್ರತಿ ವರ್ಷವೂ ಸಹಕಾರ ಸಪ್ತಾಹದ ಆಚರಣೆಗೆ ಒಂದು ವಿಶಿಷ್ಟವಾದ ಧ್ಯೇಯವನ್ನು ಅಂತರರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆಯವರು ನಿಗದಿಪಡಿಸುವುದರ ಮೂಲಕ 7 ದಿನಗಳ ಆಚರಣೆಗಳಿಗೆ ಯಾವ ರೀತಿಯ ಮಹತ್ವವನ್ನು ಜೋಡಿಸಬೇಕು ಎಂಬುದನ್ನು ತೀರ್ಮಾನಿಸುತ್ತಾರೆ. ಅದರಂತೆ, ರಾಷ್ಟ್ರೀಯ ಸಹಕಾರ ಯೂನಿಯನ್‌ನವರು ಈ ಎಲ್ಲಾ ವಿಷಯಗಳನ್ನು ರಾಷ್ಟ್ರದಾದ್ಯಂತ ಅರ್ಥಪೂರ್ಣವಾಗಿ ಆಚರಿಸಲು ತಿಳಿಸುತ್ತಾರೆ.

ಈ ಬಾರಿಯ ಸಹಕಾರ ಸಪ್ತಾಹದ ಧ್ಯೇಯ

**"ಸಹಕಾರ ಸಂಸ್ಥೆಗಳ ಮೂಲಕ ಮೇಕ್ ಇನ್ ಇಂಡಿಯಾ"**

**(ಸಹಕಾರ ಸಂಸ್ಥೆಗಳ ಮೂಲಕ ಭಾರತೀಯ ಉತ್ಪಾದನೆ)**

**(Make in India through Co-operatives)**



**ರಾಜ್ಯ ಮಟ್ಟದ ಸಹಕಾರ ಸಂಸ್ಥೆಗಳು, ಸ್ಥಳೀಯ ಸಹಕಾರ ಸಂಸ್ಥೆಗಳ ಸಹಯೋಗದೊಂದಿಗೆ ಈ ಕೆಳಕಂಡ ಸ್ಥಳಗಳಲ್ಲಿ ಸಪ್ತಾಹ ಆಚರಿಸಲಾಗುವುದು**

| ದಿನಾಂಕ | ಸಹಕಾರ ಸಪ್ತಾಹದ ದಿನ | ಆಚರಿಸುವ ಸ್ಥಳ |
|---|---|---|
| 14.11.2015 ಶನಿವಾರ | ಉದ್ಯೋಗ ಮತ್ತು ನೈಪುಣ್ಯತೆಯ ಅಭಿವೃದ್ಧಿಯ ದಿನ<br>Skill development and employment day | ಮೈಸೂರು |
| 15.11.2015 ಭಾನುವಾರ | ಸಹಕಾರಿ ಸಂಘಗಳು ಮತ್ತು ಆರ್ಥಿಕ ಸಾಕ್ಷರತೆಯ ದಿನ<br>Financial inclusion and co-operatives day | ಬೆಂಗಳೂರು |
| 16.11.2015 ಸೋಮವಾರ | ಸ್ವಚ್ಛ ಭಾರತ ಅಭಿಯಾನ ಮತ್ತು ಶುದ್ಧ ಕುಡಿಯುವ ನೀರಿನ ಘಟಕಗಳ ಸ್ಥಾಪನೆಯಲ್ಲಿ ಸಹಕಾರ ಸಂಘಗಳ ಪಾತ್ರ ದಿನ<br>Role of co-operative in 'Swach Bharat Abhiyan' & Supplying of 'Purified Water Units' day | ಚಿತ್ರದುರ್ಗ |
| 17.11.2015 ಮಂಗಳವಾರ | ಸಹಕಾರಿ ಸಂಘಗಳ ನಡುವಿನ ಸಹಕಾರವನ್ನು ಬಲಪಡಿಸುವುದು ಮತ್ತು ಸಹಕಾರ ಬ್ಯಾಂಕುಗಳನ್ನು ಖಾಸಗೀಕರಣಗೊಳಿಸುವ ಪ್ರಯತ್ನವನ್ನು ವಿರೋಧಿಸುವ ಬಗ್ಗೆ ಚಿಂತಿಸುವ ದಿನ<br>Strengthening co-operation among co-operatives and Examining the proposal of privatising Urban Co-operative Banks day | ಚಿಕ್ಕಮಗಳೂರು |
| 18.11.2015 ಬುಧವಾರ | ಸಹಕಾರಿ ಮಾರುಕಟ್ಟೆ, ಸಂಸ್ಕರಣ ಮತ್ತು ಮೌಲ್ಯವರ್ಧನೆ ದಿನ<br>Co-operative Marketing, Processing and Value addition day | ಬೆಂಗಳೂರು |
| 19.11.2015 ಗುರುವಾರ | ಸಹಕಾರಿ ಸಂಘಗಳ ಮೂಲಕ ಪ್ರಕೃತಿ ವಿಕೋಪಗಳ ನಿರ್ವಹಣೆ ಮತ್ತು ರೈತರಲ್ಲಿ ಆತ್ಮ ಸ್ಥೈರ್ಯ ತುಂಬುವಲ್ಲಿ ಸಹಕಾರ ಸಂಘಗಳ ಪಾತ್ರದ ದಿನ<br>Mitigating calamity through co-operatives & Instill confidence among the farmers day | ಕೂಡಲಸಂಗಮ, ಬಾಗಲಕೋಟೆ ಜಿಲ್ಲೆ |
| 20.11.2015 ಶುಕ್ರವಾರ | ಸಹಕಾರ ಸಂಘಗಳ ಬಲವರ್ಧನೆಗಾಗಿ ಕಾನೂನು ಬಲಪಡಿಸುವ ದಿನ<br>Enabling legislation for co-operatives day | ಕಲಬುರಗಿ |

ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ಸಹಕಾರ ಸಪ್ತಾಹವನ್ನು ಅರ್ಥಪೂರ್ಣವಾಗಿ ಆಚರಿಸಲು ಕ್ರಮವಿಡುವುದು. ಈ ದಿನಗಳಲ್ಲಿ ಸಹಕಾರದ ಸಪ್ತ ವರ್ಣದ ಧ್ವಜವನ್ನು ಹಾರಿಸುವುದು, ಸಹಕಾರಿಯ ಸದಸ್ಯತ್ವವನ್ನು ಹೆಚ್ಚಿಸುವ ಬಗ್ಗೆ ಅಭಿಯಾನ ಆರಂಭಿಸುವುದು, ಸಾಲ ವಸೂಲಾತಿ ಕಾರ್ಯಕ್ರಮ ಹಮ್ಮಿಕೊಳ್ಳುವುದು, ಸಹಕಾರಿಯಲ್ಲಿ ಹೊಸ ಬಗೆಯ ಕಾರ್ಯಕ್ರಮಗಳನ್ನು ಪ್ರಾರಂಭಿಸುವುದು, ಹಿರಿಯ ಸಹಕಾರಿಗಳನ್ನು ಸನ್ಮಾನಿಸುವುದು, ಶಾಲಾ ಕಾಲೇಜುಗಳಲ್ಲಿ ಸಹಕಾರ ಹಾಗೂ ಜ್ವಲಂತ ವಿಷಯಗಳ ಬಗ್ಗೆ ಪ್ರಬಂಧ ಸ್ಪರ್ಧೆ ಏರ್ಪಡಿಸುವುದು, ಚರ್ಚಾಸ್ಪರ್ಧೆ ಏರ್ಪಡಿಸುವುದು, ಸಭೆ ಸಮಾರಂಭಗಳನ್ನು ಏರ್ಪಡಿಸುವುದು, ತಜ್ಞರಿಂದ ವಿವಿಧ ವಿಷಯಗಳ ಬಗ್ಗೆ ಉಪನ್ಯಾಸಗಳನ್ನು ಏರ್ಪಡಿಸುವುದು, ಭಿತ್ತಿ ಪತ್ರಗಳ ಮೂಲಕ ಸಾಧನೆಗಳನ್ನು ಪ್ರಚಾರ ಮಾಡುವುದು, ಪ್ರಭಾತ ಫೇರಿ (ಬೆಳಗಿನ ಜಾವದಲ್ಲಿ ಬೀದಿಗಳಲ್ಲಿ ಸಹಕಾರ ಚಳುವಳಿಯ ಘೋಷಣೆಗಳನ್ನು ಹೇಳುತ್ತಾ ಮೆರವಣಿಗೆ ಬರುವುದು) ಹೀಗೆ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಹಕಾರ ಕ್ಷೇತ್ರದ ಅಭಿವೃದ್ಧಿಯಲ್ಲಿ ಪಾಲ್ಗೊಳ್ಳುವ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಲು ತಿಳಿಸಿದೆ.

**ಶರಣಗೌಡ ಜಿ. ಪಾಟೀಲ್**

ವ್ಯವಸ್ಥಾಪಕ ನಿರ್ದೇಶಕರು

### ಸಂಯುಕ್ತ ಸಹಕಾರಿಯ ನಿವೇಶನದಲ್ಲಿ ಭೂಮಿ ಪೂಜೆ ಹಾಗೂ ಶಿಲಾನ್ಯಾಸ

# ಸಂಯುಕ್ತ ಸಹಕಾರಿಯ ಸಾಧನೆ ಶ್ಲಾಘನೀಯ : ಸೌಹಾರ್ದ ಸಹಕಾರಿಗಳ ಸಾಧನೆ ಹಾಗೂ ಕಾರ್ಯ ತೃಪ್ತಿಕರ, ಬೆಂಗಳೂರಿನ ಸಮಾವೇಶದಲ್ಲಿ ಸಹಕಾರ ಸಚಿವರಾದ ಶ್ರೀ ಹೆಚ್.ಎಸ್. ಮಹದೇವಪ್ರಸಾದ್



ಭೂಮಿ ಪೂಜೆ




ಶಿಲಾನ್ಯಾಸ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಬೆಂಗಳೂರು ವಿಭಾಗೀಯ ಸಮಾವೇಶವು ದಿನಾಂಕ : 17.10.2015 ರಂದು ಬೆಂಗಳೂರಿನ ಮಲ್ಲೇಶ್ವರಂನಲ್ಲಿರುವ ಕೆನರಾ ಯೂನಿಯನ್ ಸಭಾಂಗಣದಲ್ಲಿ ನಡೆಯಿತು. ಸಮಾವೇಶವನ್ನು ಉದ್ಘಾಟಿಸಿದ ಸಹಕಾರ ಸಚಿವರಾದ ಶ್ರೀ ಹೆಚ್.ಎಸ್.ಮಹದೇವಪ್ರಸಾದ್‌ರವರು ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ದಿನಾಂಕ : 1–1–2001 ರಿಂದ ಜಾರಿಗೆ ಬಂದಿದೆ.

15 ವರ್ಷಗಳ ಅವಧಿಯಲ್ಲಿ 3350 ಕ್ಕಿಂತಲೂ ಹೆಚ್ಚು ಸೌಹಾರ್ದ ಸಹಕಾರಿಗಳು ನೋಂದಣಿಯಾಗಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿವೆ. ವಿಭಿನ್ನ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. 1959ರ ಸಹಕಾರ ಕಾಯ್ದೆಯ ಸಹಕಾರ ಸಂಸ್ಥೆಗಳಿಗೆ ಈ ಚಟುವಟಿಕೆಗಳು ಉತ್ಸಾಹದಾಯಕವಾಗಿವೆ. ಸೌಹಾರ್ದ ಸಹಕಾರಿಗಳ ಕಾಯ್ದೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರಿ ಸಂಸ್ಥೆಗಳ ಸಾಧನೆ ಹಾಗೂ ಕಾರ್ಯಚಟುವಟಿಕೆಗಳು ತೃಪ್ತಿಕರವಾಗಿವೆ ಎಂದು ತಿಳಿಸಿದರು.

ರಾಜ್ಯದ ಸೌಹಾರ್ದ ಸಹಕಾರಿಗಳ ಮಾತೃಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿರುವ ಸಂಯುಕ್ತ ಸಹಕಾರಿಯು ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಯನ್ನು ಗಮನದಲ್ಲಿಟ್ಟು ಸೌಹಾರ್ದ ಸಹಕಾರಿ ಕಾಯ್ದೆಗೆ ಕೆಲವು ತಿದ್ದುಪಡಿಗಳ ಪ್ರಸ್ತಾವನೆಯನ್ನು ಸಲ್ಲಿಸಿದೆ. ಸದ್ಯದಲ್ಲಿಯೇ ಅವುಗಳನ್ನು ಪರಿಶೀಲಿಸಿ, ಅಗತ್ಯ ತಿದ್ದುಪಡಿಗಳನ್ನು ತರಲಾಗುವುದು. ಸಂಯುಕ್ತ ಸಹಕಾರಿಯ ಶಾಸನಬದ್ಧ ಚಟುವಟಿಕೆಗಳು ಹಾಗೂ ತರಬೇತಿ ಕಾರ್ಯಕ್ರಮಗಳು ಉತ್ತಮವಾಗಿವೆ ಎಂದರು.

ಸಮಾವೇಶದ ಪೂರ್ವದಲ್ಲಿ ಸಹಕಾರ ಸಚಿವರಾದ ಶ್ರೀ ಹೆಚ್.ಎಸ್.ಮಹದೇವಪ್ರಸಾದ್‌ರವರು ಸಂಯುಕ್ತ ಸಹಕಾರಿಯು ಹೊಸದಾಗಿ ಖರೀದಿಸಿರುವ ಸ್ಥಳದಲ್ಲಿ ಭೂಮಿ ಪೂಜೆ ಹಾಗೂ ಶಿಲಾನ್ಯಾಸ ಕಾರ್ಯಕ್ರಮವನ್ನು ನೆರವೇರಿಸಿ, ಅತ್ಯಲ್ಪ ಅವಧಿಯಲ್ಲಿ ಸಂಯುಕ್ತ ಸಹಕಾರಿಯು ತನ್ನದೇ ಆದ ಸ್ವಂತ ನಿವೇಶನವನ್ನು ಹೊಂದಿ, ಕಟ್ಟಡ ನಿರ್ಮಾಣ ಮಾಡಲು ಕ್ರಮವಿಡುತ್ತಿರುವುದು ಶ್ಲಾಘನೀಯ ಎಂದರು.

ಸಮಾವೇಶ ಶ್ರೀ ರಾಜಶೇಖರ್ ಮತ್ತು ತಂಡದವರಿಂದ ರೈತಗೀತೆ



ಸಮಾವೇಶ ಉದ್ಘಾಟನೆ



ಸಹಕಾರ ಸಚಿವರಿಗೆ ಕಾಯ್ದೆ ತಿದ್ದುಪಡಿ ಕುರಿತು ಸೌಹಾರ್ದ ಸಹಕಾರಿಗಳ ಪರವಾಗಿ ಮನವಿ

ಯೊಂದಿಗೆ ಪ್ರಾರಂಭವಾಯಿತು. ನಂತರ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಅತಿಥಿ ಗಣ್ಯರ ಸ್ವಾಗತ ಹಾಗೂ ಪರಿಚಯ ಕಾರ್ಯಕ್ರಮವನ್ನು ನೆರವೇರಿಸಿದರು.

ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವ್ ರವರು ಪ್ರಾಸ್ತಾವಿಕ ಭಾಷಣ ಮಾಡಿ, ಬೆಂಗಳೂರಿನ ಈ ಸಮಾವೇಶ ಪ್ರಸಕ್ತ ಸಾಲಿನ ಎರಡನೆಯ ಸಮಾವೇಶವಾಗಿದೆ. ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳನ್ನು ಹೆಚ್ಚು ಗುಣಮಟ್ಟ ಸಾಧನೆಗಾಗಿ ಹಾಗೂ ಬೆಳವಣಿಗೆಯ ವೇಗವನ್ನು ಹೆಚ್ಚಿಸುವುದಕ್ಕಾಗಿ ಮತ್ತು ಸೌಹಾರ್ದ ಸಹಕಾರಿಗಳ ಸಾಧನೆ ಮತ್ತು ಪ್ರಗತಿಯನ್ನು ಸಾರ್ವಜನಿಕರಿಗೆ ತಿಳಿಯಪಡಿಸುವುದಕ್ಕಾಗಿ ಈ ಸಮಾವೇಶ ಪೂರಕವಾಗಲಿದೆ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ಸಂಯುಕ್ತ ಸಹಕಾರಿಯ ನಿವೇಶನ ಹೊಂದುವುದಕ್ಕೆ ಹಾಗೂ ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿಯ ಸಾಧನೆಗಳಿಗೆ ಕಾರಣರಾಗಿರುವ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತಾ ಸೌಹಾರ್ದ ಸಹಕಾರಿ ಚಳುವಳಿ ಪ್ರಾರಂಭದಿಂದಲೂ ಕಾಯ್ದೆಯ ಅನೇಕ ತೊಡಕುಗಳನ್ನು, ಸಹಕಾರಿಗಳ ಹಾಗೂ ಅಧಿಕಾರಿಗಳ ಅಸಹಕಾರಗಳನ್ನು ಎದುರಿಸುತ್ತಾ ಹೋರಾಟ



ಸಮಾವೇಶದಲ್ಲಿ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು

ಮಾಡುತ್ತಲೇ ಬಂದಿದೆ. ಮಾಜಿ ಸಹಕಾರ ಸಚಿವರಾದ ಶ್ರೀ ಎಸ್.ಎಸ್.ಪಾಟೀಲ ಹಾಗೂ ಕೆಲವು ಹಿರಿಯ ಸಹಕಾರಿಗಳ ಹಾಗೂ ಕೆಲವು ಹಿರಿಯ ಅಧಿಕಾರಿಗಳ ಪ್ರಯತ್ನದಿಂದ ಹಾಗೂ ದೃಢ ಸಂಕಲ್ಪದಿಂದ ಈ ಕಾಯ್ದೆ ಜಾರಿಗೆ ಬಂದಿದೆ. ಮುಂಬರುವ ದಿನಗಳಲ್ಲಿಯೂ ಸಹ ಅನೇಕ ಕಾರ್ಯಚಟುವಟಿಕೆಗಳನ್ನು ಈ ಸೌಹಾರ್ದ ಸಹಕಾರಿಗಳಿಗಾಗಿ ಸಂಯುಕ್ತ ಸಹಕಾರಿಯು ಹಮ್ಮಿಕೊಳ್ಳುತ್ತದೆ. ಎಲ್ಲರೂ ಸಹಕರಿಸಬೇಕೆಂದು ಕೋರಿದರು, ಹಾಗೆಯೇ ಪ್ರತಿ ವಿಭಾಗದಲ್ಲೂ ಈ ರೀತಿ ಸಮಾವೇಶ ಹಾಗೂ ಸಂಪರ್ಕ ಸಭೆಗಳನ್ನು ನಡೆಸುವುದಾಗಿ ತಿಳಿಸಿದರು.

## ಈ ಕ್ಷೇತ್ರದ ಕಾರ್ಯಚಟುವಟಿಕೆಗಳು ಹಾಗೂ ಸಾಧನೆ ನನಗೆ ತೃಪ್ತಿ ತಂದಿದೆ; ಇದನ್ನು ಉಳಿಸಿಕೊಂಡು ಹೋಗುವ ಜವಾಬ್ದಾರಿ ನಿಮ್ಮದು - ಮಾಜಿ ಸಹಕಾರ ಸಚಿವರಾದ ಶ್ರೀ ಎಸ್.ಎಸ್.ಪಾಟೀಲ




ಸಮಾರಂಭದ ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಮಾತನಾಡಿದ ಮಾಜಿ ಸಹಕಾರ ಸಚಿವರಾದ ಶ್ರೀ ಎಸ್.ಎಸ್.ಪಾಟೀಲರವರು ರಾಜ್ಯದಲ್ಲಿ ಸಹಕಾರಿಗಳಿಗೆ ಸ್ವಾಯತ್ತತೆಬೇಕು. ಸರಕಾರದ ಹಸ್ತಕ್ಷೇಪ ಕನಿಷ್ಠ ಮಟ್ಟದಲ್ಲಿರಬೇಕು. ಹಾಗಾದರೆ ಸಹಕಾರ ಸಂಸ್ಥೆಗಳು ಉತ್ತಮ ಕೆಲಸ ಮಾಡಲು ಸಾಧ್ಯವಾಗುತ್ತದೆ ಎಂಬುದರ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬರಬೇಕಾದರೆ ಅಂದಿನ ಮುಖ್ಯಮಂತ್ರಿ ಶ್ರೀ ಜೆ.ಹೆಚ್.ಪಟೇಲರವರ ಸರಕಾರದಲ್ಲಿ ಸಾಕಷ್ಟು ಪ್ರಯತ್ನ ಮಾಡಬೇಕಾಯಿತು. ಕಳೆದ 15 ವರ್ಷಗಳ ಅವಧಿಯಲ್ಲಿ ಈ ಕ್ಷೇತ್ರದ ಸಾಧನೆ ನನಗೆ ತೃಪ್ತಿ ತಂದಿದೆ. ಇದನ್ನು ಉಳಿಸಿಕೊಂಡು ಹೋಗುವ ಜವಾಬ್ದಾರಿ ನಿಮ್ಮದು ಎಂದು ತಿಳಿಸಿ, ತಮ್ಮ ಸಂತೋಷವನ್ನು ವ್ಯಕ್ತಪಡಿಸುವುದರ ಜೊತೆಗೆ ಎಚ್ಚರಿಕೆಯ ಮಾತು ಹೇಳಿದರು.

# ಸಹಕಾರ ಒಂದು ಸಂಸ್ಕಾರ : ಸಮಾಜದ ಅಭಿವೃದ್ಧಿಗೆ ಸಹಕಾರಿಗಳ ಕೊಡುಗೆ ಅಪಾರ - ಸ್ವಾಮಿ ಅಭಯಾನಂದ ಮಹಾರಾಜ, ರಾಮಕೃಷ್ಣ ಆಶ್ರಮ ಯಲಹಂಕ







ಸಮಾರಂಭದ ದಿವ್ಯ ಸಾನಿಧ್ಯವನ್ನು ವಹಿಸಿ, ಮಾತನಾಡಿದ ಸ್ವಾಮಿ ಅಭಯಾನಂದ ಮಹಾರಾಜಜೀಯವರು ದೇಶದ ಅರ್ಥವ್ಯವಸ್ಥೆಯಲ್ಲಿ ಸಹಕಾರದ ಪಾತ್ರ ಮಹತ್ವದ್ದಿದೆ. ಸಹಕಾರ ಈ ದೇಶದ ಜನರ ಜೀವನ ಪದ್ಧತಿಯಾಗಿ ಬೆಳೆದು ಬಂದಿದೆ. ಈ ಕ್ಷೇತ್ರ ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಈ ಕ್ಷೇತ್ರದ ಒಳಗೆ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಕಾರ್ಯಕರ್ತರು ಒಟ್ಟಾಗಿ ಉತ್ತಮ ಬಾಂಧವ್ಯ ಹಾಗೂ ಅನ್ಯೋನತೆಯಿಂದ ಕಾರ್ಯನಿರ್ವಹಿಸುವುದು ಅಗತ್ಯ. ಆಂತರಿಕ ಸಂಬಂಧಗಳನ್ನು ಗಟ್ಟಿಗೊಳಿಸಿಕೊಳ್ಳುವುದು ಅಗತ್ಯ. ವಿಶ್ವದಲ್ಲಿ ಸಾಧಿಸಲು ಬೇಕಾದಷ್ಟಿದೆ ಎಂದು ತಿಳಿಸಿ, ಸ್ವಾಮಿ ವಿವೇಕಾನಂದರ ಜೀವನದ ಕೆಲವು ದೃಷ್ಟಾಂತಗಳನ್ನು ತಿಳಿಸಿ, ನಮ್ಮ ದೇಶದ ಸಂಸ್ಕೃತಿ, ನೆಲ ಜಲ, ಭಾಷೆಗಳಿಗಿರುವ ಶಕ್ತಿ ಬೇರೆ ದೇಶಗಳಲ್ಲಿ ಕಾಣುವುದಿಲ್ಲ. ಈ ಸಹಕಾರ ಸಂಸ್ಕೃತಿಯನ್ನು ಉಳಿಸಿ, ಬೆಳೆಸಿಕೊಂಡು ಹೋಗುವುದು ಆಧ್ಯತೆಯಾಗಿರಬೇಕು ಎಂದು ತಿಳಿಸಿದರು.

ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಿ.ನಂಜನಗೌಡ ರವರು ವಂದಿಸಿದರು ಹಾಗೂ ಶ್ರೀ ಹೆಚ್.ವಿ.ರವಿ ಕುಮಾರ್‌ರವರು ಕಾರ್ಯಕ್ರಮ ನಿರೂಪಣೆ ಮಾಡಿದರು.

ಇದೇ ಸಂದರ್ಭದಲ್ಲಿ ಅತಿಥಿಗಳಾದ ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್, ಶ್ರೀ ಎಸ್.ಎಸ್.ಪಾಟೀಲ, ಸಾನಿಧ್ಯ ವಹಿಸಿದ್ದ ಶ್ರೀ ಅಭಯಾನಂದ ಮಹಾರಾಜ ಸ್ವಾಮಿ, ಸಂಯುಕ್ತ ಸಹಕಾರಿಯ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರನ್ನು ಸಂಯುಕ್ತ ಸಹಕಾರಿಯ ಹಿರಿಯ ನಿರ್ದೇಶಕರುಗಳಾದ ಶ್ರೀ ಎಸ್.ಆರ್.ಲಕ್ಷ್ಮೀಕಾಂತ ರೆಡ್ಡಿ, ಶ್ರೀ ಎಂ.ಬಿ.ಕಲಾಲ, ಶ್ರೀ ಅರುಣ ಶಹಾಪುರ, ಎಂ.ಎಲ್.ಸಿ., ಶ್ರೀ ಎನ್.ರಮೇಶ್, ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ಶ್ರೀಮತಿ ನಾಗರತ್ನ, ಶ್ರೀ ಸಣ್ಣಸೂಗಪ್ಪ, ಶ್ರೀಮತಿ ಮಂಜುಳಾ ಪಾಟೀಲ್, ಶ್ರೀ ಎಲ್. ಎಸ್.ಆನಂದ್ ಹಾಗೂ ಶ್ರೀ ನಾಗೇಂದ್ರಗುಪ್ತ ಮುಂತಾದವರು ಸೇರಿ ಸನ್ಮಾನಿಸಿದರು. ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ಹಾಗೂ ಸಂಯುಕ್ತ ಸಹಕಾರಿಯ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರು ಈ ಎರಡೂ ಕಾರ್ಯಕ್ರಮಗಳನ್ನು ವ್ಯವಸ್ಥಿತವಾಗಿ ನಿಯೋಜಿಸಿದ್ದರು.



**"ಸೌಹಾರ್ದ ಸಹಕಾರಿಗಳ ಸಮಾವೇಶ" ಕುರಿತು ಪತ್ರಿಕಾಗೋಷ್ಠಿ :** ದಿನಾಂಕ : 15.10.2015ರಂದು "ಸೌಹಾರ್ದ ಸಹಕಾರಿಗಳ ಸಮಾವೇಶ"ದ ಸಲುವಾಗಿ ಬೆಂಗಳೂರಿನಲ್ಲಿ 'ಪತ್ರಿಕಾ ಗೋಷ್ಠಿ'ಯನ್ನು ಆಯೋಜಿಸಲಾಗಿತ್ತು. ಪತ್ರಿಕಾ ಗೋಷ್ಠಿಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ, ನಿರ್ದೇಶಕರಾದ ಶ್ರೀಮತಿ ನಾಗರತ್ನ.ಹೆಚ್.ಸಿ, ಶ್ರೀ ಎನ್. ರಮೇಶ್, ಶ್ರೀ ಆಂಜನೇಯ ಗುಪ್ತ, ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಹಾಗೂ ಉಪ ಪ್ರಧಾನ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ ಇವರುಗಳ ನಡೆಸಿಕೊಟ್ಟರು.

ಬೆಂಗಳೂರು ವಿಭಾಗ :

# ವಿವಿಧ ಜಿಲ್ಲೆಗಳಲ್ಲಿ ಪತ್ರಿಕಾ ಗೋಷ್ಠಿ ಹಾಗೂ ಸಂಪರ್ಕ ಸಭೆಗಳು




**ದಾವಣಗೆರೆ ಜಿಲ್ಲೆ :** ದಿನಾಂಕ : 06.10.2015ರಂದು ದಾವಣಗೆರೆ ಜಿಲ್ಲೆಯಲ್ಲಿ "ಸೌಹಾರ್ದ ಸಹಕಾರಿಗಳ ಸಮಾವೇಶ"ದ ಸಲುವಾಗಿ 'ಪತ್ರಿಕಾ ಗೋಷ್ಠಿ'ಯನ್ನು ಆಯೋಜಿಸಲಾಗಿತ್ತು ಹಾಗೂ ದಾವಣಗೆರೆ ಜಿಲ್ಲೆಯ ಸೌಹಾರ್ದ ಸಹಕಾರಿಗಳ 'ಸಂಪರ್ಕ ಸಭೆ'ಯನ್ನು ನಡೆಸಲಾಯಿತು. ಪತ್ರಿಕಾ ಗೋಷ್ಠಿ ಮತ್ತು ಸಂಪರ್ಕ ಸಭೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ, ನಿರ್ದೇಶಕರಾದ ಶ್ರೀ ಜಿ. ನಂಜನಗೌಡ ಹಾಗೂ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಇವರುಗಳು ನಡೆಸಿಕೊಟ್ಟರು. ಸಭೆಯಲ್ಲಿ 21 ಸೌಹಾರ್ದ ಸಹಕಾರಿಗಳಿಂದ 45 ಪ್ರತಿನಿಧಿಗಳು ಭಾಗವಹಿಸಿದ್ದರು.




**ಚಿತ್ರದುರ್ಗ ಜಿಲ್ಲೆ :** ದಿನಾಂಕ : 06.10.2015ರಂದು ಚಿತ್ರದುರ್ಗ ಜಿಲ್ಲೆಯಲ್ಲಿ "ಸೌಹಾರ್ದ ಸಹಕಾರಿಗಳ ಸಮಾವೇಶ"ದ ಸಲುವಾಗಿ 'ಪತ್ರಿಕಾ ಗೋಷ್ಠಿ'ಯನ್ನು ಆಯೋಜಿಸಲಾಗಿತ್ತು ಹಾಗೂ ಚಿತ್ರದುರ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳ 'ಸಂಪರ್ಕ ಸಭೆ'ಯನ್ನು ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಚಿತ್ರದುರ್ಗ ಇಲ್ಲಿ ನಡೆಸಲಾಯಿತು. ಪತ್ರಿಕಾ ಗೋಷ್ಠಿ ಮತ್ತು ಸಂಪರ್ಕ ಸಭೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ, ನಿರ್ದೇಶಕರಾದ ಶ್ರೀ ಎಸ್.ಆರ್. ಲಕ್ಷ್ಮೀಕಾಂತರೆಡ್ಡಿ ಹಾಗೂ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಇವರುಗಳು ನಡೆಸಿಕೊಟ್ಟರು. ಸಭೆಯಲ್ಲಿ 15 ಸೌಹಾರ್ದ ಸಹಕಾರಿಗಳಿಂದ 30 ಪ್ರತಿನಿಧಿಗಳು ಭಾಗವಹಿಸಿದ್ದರು.

**ತುಮಕೂರು ಜಿಲ್ಲೆ :** ದಿನಾಂಕ : 07.10.2015ರಂದು ತುಮಕೂರು ಜಿಲ್ಲೆಯಲ್ಲಿ "ಸೌಹಾರ್ದ ಸಹಕಾರಿಗಳ ಸಮಾವೇಶ"ದ ಸಲುವಾಗಿ 'ಪತ್ರಿಕಾ ಗೋಷ್ಠಿ'ಯನ್ನು ಆಯೋಜಿಸಲಾಗಿತ್ತು ಹಾಗೂ ತುಮಕೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ 'ಸಂಪರ್ಕ ಸಭೆ'ಯನ್ನು ಸೆಕ್ರೆಡ್ ಹಾರ್ಟ್ ಸೌಹಾರ್ದ ಪತ್ತಿನ ಸಹಕಾರಿ ನಿ., ತುಮಕೂರು ಇಲ್ಲಿ ನಡೆಸಲಾಯಿತು. ಪತ್ರಿಕಾಗೋಷ್ಠಿ ಮತ್ತು ಸಂಪರ್ಕ ಸಭೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ, ನಿರ್ದೇಶಕರಾದ ಶ್ರೀ ಬಿ.ಗಂಗಾಧರಯ್ಯ ಹಾಗೂ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಇವರುಗಳು ನಡೆಸಿಕೊಟ್ಟರು. ಸಭೆಯಲ್ಲಿ 57 ಸೌಹಾರ್ದ ಸಹಕಾರಿಗಳಿಂದ 74 ಪ್ರತಿನಿಧಿಗಳು ಭಾಗವಹಿಸಿದ್ದರು.





## ರಾಜ್ಯ ಸಂಪುಟಕ್ಕೆ ನೂತನ ಸಚಿವರು

**ಬೆಂಗಳೂರು :** ರಾಜ್ಯ ಸಚಿವ ಸಂಪುಟ ವಿಸ್ತರಣೆಯಾಗಿದ್ದು ಡಾ. ಜಿ. ಪರಮೇಶ್ವರ್, ಶ್ರೀ ಎ.ಮಂಜು, ಶ್ರೀ ವಿನಯ್ ಕುಲಕರ್ಣಿ, ಶ್ರೀ ಮನೋಹರ ತಹಶೀಲ್ದಾರ್ ಅವರುಗಳು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು. ರಾಜ್ಯಪಾಲ ಸನ್ಮಾನ್ಯ ಶ್ರೀ ವಜುಭಾಯಿ ವಾಲಾ ಅವರು ನೂತನ ಸಚಿವರಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಸಂಪುಟದ ಸದಸ್ಯರು, ಶಾಸಕರು, ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

**ಬೆಂಗಳೂರು, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳು :** ದಿನಾಂಕ 07.10.2015ರಂದು ಬೆಂಗಳೂರು, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳ ಸೌಹಾರ್ದ ಸಹಕಾರಿಗಳ 'ಸಂಪರ್ಕ ಸಭೆ'ಯನ್ನು ದಿ ಲ್ಯಾಂಡ್ ಬ್ಯಾಂಕ್, ಬೆಂಗಳೂರು ಇಲ್ಲಿ ನಡೆಸಲಾಯಿತು. ಸಭೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ, ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವ್, ನಿರ್ದೇಶಕರಾದ ಶ್ರೀಮತಿ ನಾಗರತ್ನ.ಹೆಚ್.ಸಿ, ಶ್ರೀ ಎನ್.ರಮೇಶ್, ಶ್ರೀ ಆಂಜನೇಯ ಗುಪ್ತ, ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರುಗಳು ನಡೆಸಿಕೊಟ್ಟರು. ಸಭೆಯಲ್ಲಿ 26 ಸೌಹಾರ್ದ ಸಹಕಾರಿಗಳಿಂದ 37 ಪ್ರತಿನಿಧಿಗಳು ಭಾಗವಹಿಸಿದ್ದರು.



**ಶಿವಮೊಗ್ಗ ಜಿಲ್ಲೆ :** ದಿನಾಂಕ 08.10.2015ರಂದು ಶಿವಮೊಗ್ಗ ಜಿಲ್ಲೆಯಲ್ಲಿ "ಸೌಹಾರ್ದ ಸಹಕಾರಿಗಳ ಸಮಾವೇಶ"ದ ಸಲುವಾಗಿ 'ಪತ್ರಿಕಾ ಗೋಷ್ಠಿ'ಯನ್ನು ಆಯೋಜಿಸಲಾಗಿತ್ತು ಹಾಗೂ ಶಿವಮೊಗ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳ 'ಸಂಪರ್ಕ ಸಭೆ'ಯನ್ನು ಮಥುರಾ ಪ್ಯಾರಡೈಸ್, ಶಿವಮೊಗ್ಗ ಇಲ್ಲಿ ನಡೆಸಲಾಯಿತು. ಪತ್ರಿಕಾ ಗೋಷ್ಠಿ ಮತ್ತು ಸಂಪರ್ಕ ಸಭೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಹೆಚ್.ವಿ.ರವಿಕುಮಾರ್ ಹಾಗೂ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಹಾಗೂ ಉಪ ಪ್ರಧಾನ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ ಇವರುಗಳು ನಡೆಸಿಕೊಟ್ಟರು. ಸಭೆಯಲ್ಲಿ 28 ಸೌಹಾರ್ದ ಸಹಕಾರಿಗಳಿಂದ 49 ಪ್ರತಿನಿಧಿಗಳು ಭಾಗವಹಿಸಿದ್ದರು.






**ಚಿಕ್ಕಬಳ್ಳಾಪುರ ಜಿಲ್ಲೆ :** ದಿನಾಂಕ 09.10.2015ರಂದು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ "ಸೌಹಾರ್ದ ಸಹಕಾರಿಗಳ ಸಮಾವೇಶ"ದ ಸಲುವಾಗಿ 'ಪತ್ರಿಕಾ ಗೋಷ್ಠಿ'ಯನ್ನು ಆಯೋಜಿಸಲಾಗಿತ್ತು ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳ 'ಸಂಪರ್ಕ ಸಭೆ'ಯನ್ನು ರಾಜ್ಯ ಸರ್ಕಾರಿ ನೌಕರರ ಭವನ, ಚಿಕ್ಕಬಳ್ಳಾಪುರ ಇಲ್ಲಿ ನಡೆಸಲಾಯಿತು. ಪತ್ರಿಕಾಗೋಷ್ಠಿ ಮತ್ತು ಸಂಪರ್ಕ ಸಭೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ನಾಗೇಂದ್ರ ಗುಪ್ತ ಹಾಗೂ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಇವರುಗಳು ನಡೆಸಿಕೊಟ್ಟರು. ಸಭೆಯಲ್ಲಿ 14 ಸೌಹಾರ್ದ ಸಹಕಾರಿಗಳಿಂದ 22 ಪ್ರತಿನಿಧಿಗಳು ಭಾಗವಹಿಸಿದ್ದರು.

**ಕೋಲಾರ ಜಿಲ್ಲೆ :** ದಿನಾಂಕ : 09.10.2015ರಂದು ಕೋಲಾರ ಜಿಲ್ಲೆಯಲ್ಲಿ "ಸೌಹಾರ್ದ ಸಹಕಾರಿಗಳ ಸಮಾವೇಶ"ದ ಸಲುವಾಗಿ 'ಪತ್ರಿಕಾ ಗೋಷ್ಠಿ'ಯನ್ನು ಆಯೋಜಿಸಲಾಗಿತ್ತು ಹಾಗೂ ಕೋಲಾರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಸಂಪರ್ಕ ಸಭೆಯನ್ನು ಗುತ್ತಿಗೆದಾರರ ಭವನ, ಕೋಲಾರ ಇಲ್ಲಿ ನಡೆಸಲಾಯಿತು. ಪತ್ರಿಕಾ ಗೋಷ್ಠಿ ಮತ್ತು ಸಂಪರ್ಕ ಸಭೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ನಡೆಸಿಕೊಟ್ಟರು. ಸಭೆಯಲ್ಲಿ 5 ಸೌಹಾರ್ದ ಸಹಕಾರಿಗಳಿಂದ 25 ಪ್ರತಿನಿಧಿಗಳು ಭಾಗವಹಿಸಿದ್ದರು.



# ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರತಿಷ್ಠಿತ ಸಹಕಾರಿ ಶ್ರೀ ಅರಿಹಂತ ಕ್ರೆಡಿಟ್ ಸೌಹಾರ್ದ ಸಹಕಾರಿ, ಬೋರಗಾಂವ ಬೆಳ್ಳಿಹಬ್ಬ

## ಸಹಕಾರಿ ರತ್ನ ಪ್ರಶಸ್ತಿ ಪುರಸ್ಕೃತ ಹಾಗೂ ಸಹಕಾರಿಯ ಅಧ್ಯಕ್ಷರಾಗಿರುವ ಶ್ರೀ ರಾವಸಾಹೇಬ ಅ. ಪಾಟೀಲ್‌ರವರಿಗೆ ಸನ್ಮಾನ, ಅಭಿಮಾನಿಗಳಿಂದ ಹೃದಯಸ್ಪರ್ಶಿ ಅಭಿನಂದನೆ

ದಿನಾಂಕ 13.10.2015ರಂದು ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಬೋರಗಾಂವದಲ್ಲಿರುವ ಶ್ರೀ ಅರಿಹಂತ ಕ್ರೆಡಿಟ್ ಸೌಹಾರ್ದ ಸಹಕಾರಿಯ ಬೆಳ್ಳಿಹಬ್ಬ ಕಾರ್ಯಕ್ರಮವು ಅತ್ಯಂತ ಅರ್ಥಪೂರ್ಣವಾಗಿ ಹಾಗೂ ಸಂಭ್ರಮದಿಂದ ಜರುಗಿತು. ಈ ಕಾರ್ಯಕ್ರಮದಲ್ಲಿ ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಸತೀಶ್ ಜಾರಕಿಹೊಳಿ, ಪಂಚಾಯತ್ ಹಾಗೂ ಗ್ರಾಮೀಣಾಭಿವೃದ್ಧಿ ಸಚಿವರಾದ ಶ್ರೀ ಹೆಚ್.ಕೆ.ಪಾಟೀಲ್, ಯುವಜನ ಹಾಗೂ ಕ್ರೀಡಾ ಸಚಿವರಾದ ಶ್ರೀ ಅಭಯಚಂದ್ರ ಜೈನ್, ಸಂಸದರುಗಳಾದ ಶ್ರೀ ಪ್ರಕಾಶ್ ಹುಕ್ಕೇರಿ ಹಾಗೂ ಶ್ರೀ ಪ್ರಭಾಕರ್ ಕೋರೆ, ಶಾಸಕರಾದ ಶ್ರೀ ಉಮೇಶ್ ಕತ್ತಿ, ಶ್ರೀಮತಿ ಶಶಿಕಲಾ ಜೊಲ್ಲೆ, ಕೆಓಎಫ್ ಅಧ್ಯಕ್ಷರಾದ ಶ್ರೀ ಅಣ್ಣಾಸಾಹೇಬ್ ಜೊಲ್ಲೆ, ಗಣ್ಯ ಸಹಕಾರಿಗಳು ಹಾಗೂ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ಭಾಗವಹಿಸಿ, ಸಹಕಾರಿ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸಿ, ಮುನ್ನಡೆಸುತ್ತಿರುವ ಸಹಕಾರಿಯ ಅಧ್ಯಕ್ಷರಾದ ಶ್ರೀ ರಾವಸಾಹೇಬ ಅ. ಪಾಟೀಲರವರನ್ನು ಹಾಗೂ ಅವರಿಗೆ ಸಹಕಾರ ನೀಡಿದ ಆಡಳಿತ ವರ್ಗವನ್ನು ಮತ್ತು ಸಿಬ್ಬಂದಿ ವರ್ಗದವರನ್ನು ಅಭಿನಂದಿಸಿದರು.

1959ರ ಸಹಕಾರ ಸಂಘಗಳ ಕಾಯ್ದೆಯಿಂದ 1997ರ ಸೌಹಾರ್ದ ಸಹಕಾರಿ ಕಾಯ್ದೆಗೆ 2002ರಲ್ಲಿ ಪರಿವರ್ತನೆಗೊಂಡು ಕೇವಲ 12 ವರ್ಷಗಳ ಅವಧಿಯಲ್ಲಿ ಹಲವಾರು ಪ್ರಗತಿಪರ ಯೋಜನೆಗಳನ್ನು ಜಾರಿ ಮಾಡಿ, ರಾಜ್ಯದಲ್ಲಿಯೇ ಅತ್ಯಂತ ಉತ್ತಮ ಸೌಹಾರ್ದ ಸಹಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವುದು ಶ್ಲಾಘನೀಯ. ಶ್ರೀ



ರಾವಸಾಹೇಬ ಅ. ಪಾಟೀಲ ಒಬ್ಬ ಧೀಮಂತ ಸಹಕಾರಿ ನಾಯಕ. ಅವರ ನೇತೃತ್ವದಲ್ಲಿ ಈ ಸಹಕಾರಿ ಇನ್ನೂ ಹೆಚ್ಚಿನ ರೀತಿಯಲ್ಲಿ ಕಾರ್ಯನಿರ್ವಹಿಸುವಂತಾಗಲಿ ಎಂದು ಗಣ್ಯರು ಹಾರೈಸಿದರು.

1990ರಲ್ಲಿ ಕೇವಲ 870 ಸದಸ್ಯರು ಹಾಗೂ 4,35,000 ಶೇರು ಬಂಡವಾಳದಿಂದ ಪ್ರಾರಂಭವಾದ ಈ ಸಹಕಾರಿ ಪ್ರಸ್ತುತ 7,340 ಸದಸ್ಯರು, 2.49 ಕೋಟಿ ಶೇರು ಬಂಡವಾಳ, 310 ಕೋಟಿ ಠೇವಣಿಗಳು, 19.25 ಕೋಟಿ ಮೀಸಲು ನಿಧಿಗಳು, 198 ಕೋಟಿ ಸಾಲಗಳು ಇದ್ದು, ಈ ಸಾಲಿನಲ್ಲಿ 2.00 ಕೋಟಿಗೂ ಹೆಚ್ಚು ಲಾಭ ಗಳಿಸಿದೆ. ಸಹಕಾರಿಯು 24 ಶಾಖೆಗಳನ್ನು ಹೊಂದಿದ್ದು, ಅದರಲ್ಲಿ 11 ಶಾಖೆಗಳು ಸ್ವಂತ ಕಟ್ಟಡ ಹೊಂದಿದೆ. ಎಲ್ಲಾ ಶಾಖೆಗಳಲ್ಲಿಯೂ ಗಣಕೀಕರಣ ವ್ಯವಸ್ಥೆ ಹಾಗೂ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಲಾಗಿದೆ. ಕರ್ನಾಟಕದ 'ಅತ್ಯುತ್ತಮ ಸೌಹಾರ್ದ ಸಹಕಾರಿ ಸಂಸ್ಥೆ' ಎಂಬ ಪ್ರಶಸ್ತಿಗೆ ಭಾಜನವಾಗಿದೆ. 2 ಶಾಖೆಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು, 24 ಗಂಟೆ ಸೇವೆ ನೀಡುವ ಆಂಬ್ಯುಲೆನ್ಸ್ ಹಾಗೂ ಅತ್ಯಾಧುನಿಕ ಸುಸಜ್ಜಿತ ಮುಖ್ಯ ಕಛೇರಿಯನ್ನು ಹೊಂದಿದೆ.

## ಇ-ಸ್ಟ್ಯಾಂಪ್ ಪೇಪರ್ ರದ್ದುಪಡಿಸಲು ಅನುಸರಿಸಬೇಕಾದ ವಿಧಾನಗಳು ಮತ್ತು ಹಣ ಮರುಪಾವತಿಯ ವಿಧಾನ

ಇ-ಸ್ಟ್ಯಾಂಪ್ ಪೇಪರನ್ನು ಯಾವುದೇ ಕಾರಣಗಳಿಂದಾಗಿ ರದ್ದುಪಡಿಸಬೇಕಾದರೆ ತಮ್ಮ ವ್ಯಾಪ್ತಿಯ ಜಿಲ್ಲಾ ನೋಂದಣಾಧಿಕಾರಿಯವರ ಕಛೇರಿಯಲ್ಲಿ ಇ-ಸ್ಟ್ಯಾಂಪ್ ರದ್ದುಪಡಿಸುವುದಕ್ಕೆ ಸಂಬಂಧಿಸಿದ ನಿಗದಿತ ಅರ್ಜಿಯನ್ನು ಪಡೆದು, ಭರ್ತಿ ಮಾಡಿ ಸಲ್ಲಿಸಬೇಕು. ಭರ್ತಿ ಮಾಡಿದ ಅರ್ಜಿಯೊಂದಿಗೆ ಇ-ಸ್ಟ್ಯಾಂಪ್‌ನ್ನು ರದ್ದುಪಡಿಸುವ ಕಾರಣ ಸಹಿತವಾದ ಅಫಿಡವಿಟ್ ಮತ್ತು ಅಸಲಿ ಇ-ಸ್ಟ್ಯಾಂಪ್‌ನ್ನು ಲಗತ್ತಿಸಿ ಜಿಲ್ಲಾ ನೋಂದಣಾಧಿಕಾರಿಯವರ ಕಛೇರಿಗೆ ಸಲ್ಲಿಸಬೇಕು. ಇ-ಸ್ಟ್ಯಾಂಪ್ ರದ್ದು ಪಡಿಸಲು ಸುಮಾರು 41 ಕೆಲಸ ನಿರ್ವಹಿಸುವ ದಿನಗಳ ಕಾಲಾವಕಾಶವನ್ನು ತೆಗೆದುಕೊಳ್ಳುತ್ತದೆ. ಅಂತಹ ಇ-ಸ್ಟ್ಯಾಂಪ್ ರದ್ದುಪಡಿಸಿ, ಹಣವನ್ನು ಮರುಪಾವತಿಸಬೇಕಾದರೆ ರದ್ದುಪಡಿಸುವ ಇ-ಸ್ಟ್ಯಾಂಪ್ ಪೇಪರ್ ಮೇಲೆ ಯಾವುದೇ ದಾಖಲೆಗಳು ಮುದ್ರಿತವಾಗಿದ್ದರೆ ಶೇ.20ರಷ್ಟು ಮತ್ತು ಯಾವುದೇ ದಾಖಲೆಗಳು ಮುದ್ರಿತವಾಗದಿದ್ದರೆ ಶೇ.10ರಷ್ಟು ಮೊತ್ತವನ್ನು ಕಡಿತಗೊಳಿಸಿ, ಉಳಿದ ಮೊತ್ತವನ್ನು ಸ್ಟ್ಯಾಂಪ್ ಡ್ಯೂಟಿ ಪಾವತಿಸಿದ ವ್ಯಕ್ತಿಯ ಬ್ಯಾಂಕ್ ಖಾತೆಗೆ ನೇರವಾಗಿ ಜಮಾವಾಗುತ್ತದೆ. ಯಾರು ಸ್ಟ್ಯಾಂಪ್ ಡ್ಯೂಟಿಯನ್ನು ಪಾವತಿ ಮಾಡಿರುತ್ತಾರೋ, ಅವರಿಗೆ ಮಾತ್ರ ಮರುಪಾವತಿಯಾಗುತ್ತದೆ. ಈ ಮರುಪಾವತಿಯ ಮೊತ್ತವನ್ನು ಸ್ಟ್ಯಾಂಪ್ ಡ್ಯೂಟಿ ಪಾವತಿಸಿದ ವ್ಯಕ್ತಿಯನ್ನು ಹೊರತುಪಡಿಸಿ ಯಾವುದೇ ಮೂರನೇ ವ್ಯಕ್ತಿಗೆ ಪಾವತಿಸುವುದಿಲ್ಲ.

**– ಶ್ರೀಮತಿ ಆರ್.ಶೋಭಾ, ಸಹಪ್ರಧಾನ ವ್ಯವಸ್ಥಾಪಕರು, ಹಣಕಾಸು ಮತ್ತು ಸೇವೆಗಳ ವಿಭಾಗ**

ಸ್ವಾಭಿಮಾನಿ ಸಹಕಾರಿ



ಕಲಬುರಗಿ ವಿಭಾಗ :

# ಕಲಬುರಗಿ, ಯಾದಗಿರಿ ಹಾಗೂ ಬೀದರ್ ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರಿಗಾಗಿ "ಕ್ರಿಯಾ ಯೋಜನೆ ಸಭೆ"

## ಸಹಕಾರ ಕ್ಷೇತ್ರದಿಂದ ಸಮಾಜದಲ್ಲಿ ನಾಯಕತ್ವ ಬೆಳವಣಿಗೆ - ಗುರುನಾಥ ಜಾಂತಿಕರ

**ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,ದ ವತಿಯಿಂದ ದಿನಾಂಕ 10.10.2015ರಂದು ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ 2013 ರಿಂದ ನೋಂದಣಿಯಾದ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರಿಗಾಗಿ "ಕ್ರಿಯಾ ಯೋಜನೆ ಸಭೆ"ಯನ್ನು ಕಲಬುರಗಿ ನಗರದ ಛೇಂಬರ್ ಆಫ್ ಕಾಮರ್ಸ್‌ನ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು.

ಸಭೆಯನ್ನು ಉದ್ಘಾಟಿಸಿ, ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರವರು ಇಂದು ಸಮಾಜದಲ್ಲಿ ಸಹಕಾರ ಕ್ಷೇತ್ರದಿಂದ ಅನೇಕ ನಾಯಕರು ಹುಟ್ಟಿಕೊಂಡಿದ್ದಾರೆ. ರಾಜ್ಯದ ಸೌಹಾರ್ದ ಸಹಕಾರಿಗಳ ಮಾತೃ ಸಂಸ್ಥೆಯಾದ ಸಂಯುಕ್ತ ಸಹಕಾರಿಯು ಸಹಕಾರಿಗಳ ಅಧ್ಯಕ್ಷರು, ನಿರ್ದೇಶರು, ಮುಖ್ಯಕಾರ್ಯನಿರ್ವಾಹಕರಿಗಾಗಿ ವಿವಿಧ ರೀತಿಯಲ್ಲಿ ಸಹಕಾರಿಗಳ ಅವಶ್ಯಕತೆಗನುಗುಣವಾಗಿ ತರಬೇತಿ ಕಾರ್ಯಾಗಾರಗಳನ್ನು ಆಯೋಜಿಸುತ್ತಿದೆ. ಅದೇರೀತಿಯಲ್ಲಿ ಹೊಸದಾಗಿ ನೋಂದಣಿಯಾದ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ನಿರ್ದೇಶರು ಹಾಗೂ ಮುಖ್ಯಕಾರ್ಯನಿರ್ವಾಹಕರಿಗಾಗಿ "ಕ್ರಿಯಾ ಯೋಜನಾ ಸಭೆ"ಯನ್ನು ಪ್ರಥಮ ಬಾರಿಗೆ ಏರ್ಪಡಿಸಲಾಗಿದೆ. ಆಡಳಿತ ಮಂಡಳಿಗೆ ಕಾಯ್ದೆ ಕಾನೂನಿನ ಹಾಗೂ ಪ್ರಚಲಿತ ಬದಲಾವಣೆಯ ಕುರಿತು



ಜ್ಞಾನ ಇದ್ದಲ್ಲಿ ಸಂಸ್ಥೆಯ ಬೆಳವಣಿಗೆಗೆ ಪೂರಕ ಅಂಶವುಳ್ಳಂತಾಗುತ್ತದೆ ಎಂದು ತಿಳಿಸಿದರು. ಸಹಕಾರಿಗಳ ನಿರ್ದೇಶಕರಿಗಾಗಿ ರಾಜ್ಯ ಮಟ್ಟದಲ್ಲಿ ತರಬೇತಿ ನೀಡಲಾಗುತ್ತಿದೆ, ಅದಲ್ಲದೇ ರಾಷ್ಟ್ರದಲ್ಲಿರುವ ವಿಶಿಷ್ಠ ಸಹಕಾರಿಗಳ ಬೆಳವಣಿಗೆ ಕುರಿತು ತಿಳಿಯಲು ಅಧ್ಯಯನ ಪ್ರವಾಸವನ್ನು ಸದಸ್ಯ ಸಹಕಾರಿಗಳಿಗೆ ಆಯೋಜಿಸಲಾಗುತ್ತಿದೆ. ಸಹಕಾರಿಯು ಒಂದು ಸಾಮಾಜಿಕ ಬದ್ಧತೆಯುಳ್ಳ ವ್ಯವಹಾರಿಕ ಸಂಸ್ಥೆ (Business Organization with Social Commitment) ಎಂದು ತಿಳಿಸಿದರು. ಸಭೆಯಲ್ಲಿ ಸಂಯುಕ್ತ ಸಹಕಾರಿಯ ಯಾದಗಿರಿ ಜಿಲ್ಲೆಯ ನಿರ್ದೇಶಕರಾದ ಶ್ರೀ ವೈ.ಟಿ.ಪಾಟೀಲ ಹಾಗೂ ಕಲಬುರಗಿ ವಿಭಾಗೀಯ ಅಧಿಕಾರಿ ಶ್ರೀ ಸಂಜಯ ಕೋರಟಕರ ಉಪಸ್ಥಿತರಿದ್ದರು. 39 ಸಹಕಾರಿಗಳಿಂದ 80 ಪ್ರತಿನಿಧಿಗಳು ಭಾಗವಹಿಸಿ, ಕಾರ್ಯಾಗಾರದ ಪ್ರಯೋಜನ ಪಡೆದರು.



## 'ಪಾರದರ್ಶಕತೆಯಿಂದ ಸಂಸ್ಥೆಯ ಯಶಸ್ಸು' - ಗುರುನಾಥ ಜಾಂತಿಕರ

**ಬೀದರ್ ಜಿಲ್ಲೆ :** ದಿನಾಂಕ : 20.10.2015 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,ದ ವತಿಯಿಂದ ಬೀದರ್ ಜಿಲ್ಲೆಯಲ್ಲಿ 2013 ರಿಂದ ನೋಂದಣಿಯಾದ ಸೌಹಾರ್ದ ಸಹಕಾರಿಗಳ ಅಧ್ಯಕರು, ಉಪಾಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರಿಗಾಗಿ "ಕ್ರಿಯಾ ಯೋಜನೆ ಸಭೆ"ಯನ್ನು ಬೀದರ್ ನಗರದ ಶಾರದಾ ರೋಡ್ ಶೆಡ್‌ನಲ್ಲಿ ಹಮ್ಮಿಕೊಳ್ಳಲಾಗಿತ್ತು. ಸಭೆಯನ್ನು ಉದ್ಘಾಟಿಸಿ, ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ಆಡಳಿತ ಮಂಡಲಿ ಹಾಗೂ ಸಿಬ್ಬಂದಿಯು ಪ್ರಾಮಾಣಿಕತೆ, ದಕ್ಷತೆ, ಪಾರದರ್ಶಕತೆ, ಸಮಯ ಪಾಲನೆಗೆ ಪ್ರಾಮುಖ್ಯತೆ ನೀಡಿ, ಕಾರ್ಯನಿರ್ವಹಿಸಿದರೆ ಸಹಕಾರಿ ಸಂಸ್ಥೆಗಳು ಯಶಸ್ಸು ಸಾಧಿಸಬಹುದು ಎಂದರು. ಸಹಕಾರಿ ಸಂಸ್ಥೆಗಳು ರಾಜಕೀಯ ಮುಕ್ತವಾಗಿರಬೇಕು. ಪ್ರಗತಿಗೆ ಪೂರಕವಾಗಿರುವ ನಿಯಮಾವಳಿಗಳನ್ನು ಅಚ್ಚುಕಟ್ಟಾಗಿ ಪಾಲಿಸುವ ಮೂಲಕ ಗುಣಾತ್ಮಕವಾಗಿ ಬೆಳೆಯಬೇಕು ಎಂದರು. 15 ಸಹಕಾರಿಗಳಿಂದ 28 ಪ್ರತಿನಿಧಿಗಳು ಭಾಗವಹಿಸಿ, ತರಬೇತಿಯ ಪ್ರಯೋಜನ ಪಡೆದರು.

**ಬೆಳಗಾವಿ ವಿಭಾಗ :**

### ಹೊಸ ಸೌಹಾರ್ದ ಸಹಕಾರಿಗಳಿಗಾಗಿ "ಪ್ರವೇಶ ತರಬೇತಿ" ಕಾರ್ಯಕ್ರಮ

## ಸಹಕಾರಿ ಸಂಸ್ಥೆಗಳ ಅಭಿವೃದ್ಧಿಗೆ ದಕ್ಷ ಆಡಳಿತ ಅವಶ್ಯಕ - ಶ್ರೀ ಅರುಣ ಶಹಾಪುರ

**ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳು** : ದಿನಾಂಕ 29.10.2015ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ವತಿಯಿಂದ ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳಲ್ಲಿನ ಹೊಸ ಸೌಹಾರ್ದ ಸಹಕಾರಿಗಳಿಗಾಗಿ "ಪ್ರವೇಶ ತರಬೇತಿ" ಕಾರ್ಯಕ್ರಮವನ್ನು ವಿಜಯಪುರ ಪಟ್ಟಣದ ಜಿಲ್ಲಾ ಸಹಕಾರಿ ಯೂನಿಯನ್ ಸಭಾಭವನದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿ, ಮಾತನಾಡಿದ ವಿಧಾನ ಪರಿಷತ್ ಸದಸ್ಯರು ಮತ್ತು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಅರುಣ ಶಹಾಪುರರವರು ಸೌಹಾರ್ದ ಸಹಕಾರಿ ಕಾನೂನು ಜಾರಿಯಲ್ಲಿ ಬಂದ ನಂತರ ಸಹಕಾರಿ ಕ್ಷೇತ್ರಕ್ಕೆ ಹೊಸ ಶಕ್ತಿ ದೊರಕಿದೆ. ಸದರಿ ಕಾಯ್ದೆಯಡಿ ಕಳೆದ 15 ವರ್ಷದಲ್ಲಿ 3300ಕ್ಕೂ ಮೇಲ್ಪಟ್ಟು ಸಂಸ್ಥೆಗಳು ನೋಂದಣಿಗೊಂಡಿದ್ದು, ಈ ಸಂಸ್ಥೆಗಳಲ್ಲಿ ಯುವಕರು ಹೆಚ್ಚಿನ ಹುಮ್ಮಸ್ಸಿನಿಂದ ಕಾರ್ಯನಿರ್ವಹಿಸುತ್ತಿದ್ದಾರೆ.

ಇವುಗಳ ಇನ್ನೂ ಹೆಚ್ಚಿನ ಅಭಿವೃದ್ಧಿಗೆ ದಕ್ಷ ಆಡಳಿತದ ಅವಶ್ಯಕತೆ ಇದೆ ಎಂದರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಸಹಕಾರಿ ಯೂನಿಯನ್



ಉಪಾಧ್ಯಕ್ಷರಾದ ಶ್ರೀ ಕೆ.ಬಿ.ಪಾಟೀಲ್‌ರವರು ಆಗಮಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಿ.ಎನ್.ಪಾಟೀಲರವರು ಸಹಕಾರಿಗಳು ಯಶಸ್ವಿಯಾಗಿ ಕಾರ್ಯನಿರ್ವಹಿಸಬೇಕಾದರೆ ಅವುಗಳು ತಮ್ಮ ದೈನಂದಿನ ವ್ಯವಹಾರದಲ್ಲಿ ನೀತಿ ನಿಯಮಗಳ ಅಳವಡಿಕೆ ಹಾಗೂ ಉತ್ತಮ ಕ್ರಿಯಾಶೀಲತೆ ಜೊತೆಗೆ ನಿಷ್ಪಕ್ಷಪಾತವಾದ ಗ್ರಾಹಕರ ಸೇವೆ, ನ್ಯಾಯ ಹಾಗೂ ದಕ್ಷತೆಯಿಂದ ಕಾರ್ಯನಿರ್ವಹಿಸಬೇಕು ಎಂದರು.

42 ಸೌಹಾರ್ದ ಸಹಕಾರಿಗಳಿಂದ 55 ಪ್ರತಿನಿಧಿಗಳು ಭಾಗವಹಿಸಿ, ತರಬೇತಿಯ ಪ್ರಯೋಜನ ಪಡೆದರು.

## ದಕ್ಷ ಮತ್ತು ಸ್ವಚ್ಛ ಆಡಳಿತದಿಂದ ಸಹಕಾರಿಗಳ ಅಭಿವೃದ್ಧಿ ಸಾಧ್ಯ - ಶ್ರೀ ಎಂ.ಬಿ.ಕಲಾಲ

**ಧಾರವಾಡ, ಗದಗ, ಹಾವೇರಿ ಮತ್ತು ಉತ್ತರ ಕನ್ನಡ ಜಿಲ್ಲೆಗಳು** : ದಿನಾಂಕ 30.10.2015ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ವತಿಯಿಂದ ಧಾರವಾಡ, ಗದಗ, ಹಾವೇರಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿಯ ಹೊಸ ಸೌಹಾರ್ದ ಸಹಕಾರಿಗಳಿಗಾಗಿ "ಪ್ರವೇಶ ತರಬೇತಿ" ಕಾರ್ಯಕ್ರಮವನ್ನು ಹುಬ್ಬಳ್ಳಿ-ಧಾರವಾಡ ಮುನ್ಸಿಪಲ್ ನೌಕರರ ಸಭಾ ಭವನ, ಜೆ.ಸಿ. ನಗರ, ಹುಬ್ಬಳ್ಳಿ ಇಲ್ಲಿ ಏರ್ಪಡಿಸಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿ, ಮಾತನಾಡಿದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಂ.ಬಿ.ಕಲಾಲರವರು ಸೌಹಾರ್ದ ಸಹಕಾರಿ ಸಂಸ್ಥೆಗಳಿಗೆ ಸ್ವಾಯತ್ತತೆಯ ಲಾಭ ದೊರಕಿದ್ದು, ದಕ್ಷ ಮತ್ತು ಸ್ವಚ್ಛ ಆಡಳಿತದಿಂದ ಉತ್ತಮ ಅಭಿವೃದ್ಧಿ ಹೊಂದಲು ಸಾಧ್ಯ ಎಂದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಭಾಸ್ಕರ ಹೆಗಡೆ ಕಾಗೇರಿಯವರು ಸಹಕಾರಿ ಸಂಸ್ಥೆಗಳು ಧರ್ಮದತ್ತಿ ಸಂಸ್ಥೆಗಳಾಗಿರದೇ, ಸಾಮಾಜಿಕ ಬದ್ಧತೆಯುಳ್ಳ ಆರ್ಥಿಕ ಸಂಸ್ಥೆಗಳಾಗಿರುತ್ತವೆ. ವೈಜ್ಞಾನಿಕ ರೀತಿಯಲ್ಲಿ ಠೇವುಗಳನ್ನು ಸ್ವೀಕರಿಸಿ, ಉತ್ತಮ ಹಾಗೂ ವ್ಯವಹಾರಸ್ಥ ಸದಸ್ಯರಿಗೆ ಸಾಲಗಳನ್ನು ಮಂಜೂರು ಮಾಡಿ, ಸಂಸ್ಥೆಗಳ ಅಭಿವೃದ್ಧಿಗೆ



ಶ್ರಮಿಸಬೇಕೆಂದು ಕರೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ರವಿ ಯಲಿಗಾರ ರವರು ಸೌಹಾರ್ದ ಸಹಕಾರಿಯಲ್ಲಿ ಸ್ವಯಂ ಆಡಳಿತ ಹಾಗೂ ಸ್ವಯಂ ನಿಯಂತ್ರಣಗಳಿಂದಾಗಿ ಸಂಸ್ಥೆಗಳನ್ನು ಉತ್ತಮವಾಗಿ ಬೆಳೆಸಲು ವಿಫುಲ ಅವಕಾಶಗಳಿದ್ದು, ಇಂತಹ ಅವಕಾಶಗಳಿಂದಲೇ ಕರ್ನಾಟಕದಲ್ಲಿ 3300ಕ್ಕಿಂತ ಹೆಚ್ಚು ಸೌಹಾರ್ದ ಸಹಕಾರಿಗಳು ನೋಂದಣಿಗೊಂಡು ಅವುಗಳಲ್ಲಿ ಕೆಲವು ಸಹಕಾರಿಗಳು ಬಹಳಷ್ಟು ಠೇವುಗಳ ಸಂಗ್ರಹಣೆ ಮಾಡಿ, ಮಾರುಕಟ್ಟೆಯಲ್ಲಿ ಪೈಪೋಟಿ ಮಾಡುತ್ತಿವೆ ಎಂದು ತಿಳಿಸಿದರು.

20 ಸೌಹಾರ್ದ ಸಹಕಾರಿಗಳಿಂದ 40 ಪ್ರತಿನಿಧಿಗಳು ಭಾಗವಹಿಸಿ, ತರಬೇತಿಯ ಪ್ರಯೋಜನ ಪಡೆದರು.

## ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ–ಆಪರೇಟಿವ್‌ನ ಚಿತ್ರದುರ್ಗ ಶಾಖೆಯ ಸ್ಥಳಾಂತರದ ಸಮಾರಂಭ



ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ–ಆಪರೇಟಿವ್ ಲಿ., ಕೋಲಾರ ಸಹಕಾರಿಯ ಚಿತ್ರದುರ್ಗ ಶಾಖೆಯ ಸ್ಥಳಾಂತರದ ಸಮಾರಂಭವನ್ನು ಶಾಸಕರಾದ ಶ್ರೀ ಜಿ.ಎಚ್.ತಿಪ್ಪಾರೆಡ್ಡಿಯವರು ಉದ್ಘಾಟಿಸಿದರು. ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ.,ದ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಸ್.ಆರ್. ಲಕ್ಷ್ಮೀಕಾಂತ ರೆಡ್ಡಿ, ಜಿಲ್ಲಾ ಪಂಚಾಯತ್ ಮಾಜಿ ಉಪಾಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನಸ್ವಾಮಿ, ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷರಾದ ಶ್ರೀ ಜಿ.ಎಂ.ಸುರೇಶ್, ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಶ್ರೀ ಅರುಣ್‌ಕುಮಾರ್ ಹಾಗೂ ಸಹಕಾರಿಯ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಉಪಸ್ಥಿತರಿದ್ದರು.



ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆಗಳ ನೌಕರರ ಸೌಹಾರ್ದ ಪತ್ತಿನ ಸಹಕಾರಿ ನಿ., ತುಮಕೂರು ಸಹಕಾರಿಯ 2014–15ನೇ ಸಾಲಿನ ವಾರ್ಷಿಕ ಮಹಾಸಭೆ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಸಂಸ್ಥೆಯ ಮಹಾ ಪೋಷಕರಾದ ಡಾ॥ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ಜರುಗಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ.ಗಂಗಾಧರಯ್ಯ, ಉಪಾಧ್ಯಕ್ಷರಾದ ಶ್ರೀ ಎಂ.ಎನ್.ಶಿವಕುಮಾರ್, ಸಹಕಾರಿಯ ನಿರ್ದೇಶಕರುಗಳು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



ಸಾಯಿ ಗಣೇಶ್ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿ., ಉಡುಪಿ ಸಹಕಾರಿಯ 14ನೇ ವಾರ್ಷಿಕ ಮಹಾಸಭೆಯು ಶ್ರೀ ಹೆಚ್.ಆರ್.ಶೆಣೈರವರ ಅಧ್ಯಕ್ಷತೆಯಲ್ಲಿ ನಡೆಯಿತು.



ಅರಿಹಂತ ಅರ್ಬನ್ ಸೌಹಾರ್ದ ಕ್ರೆಡಿಟ್ ಸಹಕಾರಿ ಲಿ., ಹುಲ್ಲೋಳಿ ಸಹಕಾರಿಯ 2014–15ನೇ ಸಾಲಿನ ವಾರ್ಷಿಕ ಮಹಾಸಭೆಯು ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿನ್ನಪ್ಪ ಶಾಂತಪ್ಪ ಸಪ್ತಸಾಗರ ಇವರ ಅಧ್ಯಕ್ಷತೆಯಲ್ಲಿ ಜರುಗಿತು.

ಶ್ರೀ ಶಿವಾಜಿ ಸೌಹಾರ್ದ ಪತ್ತಿನ ಸಹಕಾರಿ ನಿ., ತುಮಕೂರು ಸಹಕಾರಿಯ 11ನೇ ವಾರ್ಷಿಕ ಮಹಾಸಭೆಯು ಸಹಕಾರಿಯ ಅಧ್ಯಕ್ಷರಾದ ಶ್ರೀ ಟಿ.ಎಲ್.ಸುರೇಶ್ ರಾವ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಟಿ.ಜಿ.ಎಂ.ಸಿ ಬ್ಯಾಂಕ್‌ನ ನಿರ್ದೇಶಕರಾಗಿ ಆಯ್ಕೆಯಾಗಿರುವ ಸಹಕಾರಿ ಸದಸ್ಯರಾದ ಶ್ರೀ ಪ್ರವೀಣ್ ಕುಮಾರ್ ಪಿ. ಇವರನ್ನು ಸನ್ಮಾನಿಸಲಾಯಿತು.





ಶ್ರೀ ಜಗದ್ಗುರು ರೇಣುಕಾಚಾರ್ಯ ಪತ್ತಿನ ಸೌಹಾರ್ದ ಸಹಕಾರಿ ನಿ., ರಾಯಚೂರು ಸಹಕಾರಿಯ 3ನೇ ಸರ್ವಸದಸ್ಯರ ಸಭೆ.



ಮನಿಪ್ಲಾಂಟ್ ಮಲ್ಟಿಪರ್ಪಸ್ ಸೌಹಾರ್ದ ಕೋ ಆಪರೇಟಿವ್ ನಿ., ದಾವಣಗೆರೆ ಸಹಕಾರಿಯ 2ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಶ್ರೀ ಎಸ್.ಸಿ.ಮಹಾರುದ್ರಪ್ಪ, ನಿವೃತ್ತ ಸ.ಸ. ಸಹಾಯಕ ನಿಬಂಧಕರು, ದಾವಣಗೆರೆ ಇವರನ್ನು ಸನ್ಮಾನಿಸಲಾಯಿತು.



ಶಿವಜ್ಯೋತಿ ಸೌಹಾರ್ದ ಪತ್ತಿನ ಸಹಕಾರಿ ನಿ., ತುಮಕೂರು ಸಹಕಾರಿಯ ವಾರ್ಷಿಕ ಮಹಾಸಭೆ.



ಸುಭಾಷ್ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಭದ್ರಾವತಿ ಸಹಕಾರಿಯ 7ನೇ ವಾರ್ಷಿಕ ಸಾಮಾನ್ಯ ಸಭೆ.




ಚಿಕ್ಕೇರೂರ ಪತ್ತಿನ ಸೌಹಾರ್ದ ಸಹಕಾರಿ ನಿ., ಚಿಕ್ಕೇರೂರ ಸಹಕಾರಿಯ ವಾರ್ಷಿಕ ಮಹಾಸಭೆ. ಈ ಸಂದರ್ಭದಲ್ಲಿ 7ನೇ ತರಗತಿ, ಎಸ್.ಎಸ್.ಎಲ್.ಸಿ ಹಾಗೂ ದ್ವಿತೀಯ ಪಿಯುಸಿಗಳಲ್ಲಿ ಉತ್ತಮ ಅಂಕಗಳನ್ನು ಗಳಿಸಿದ ಸದಸ್ಯರ ಮಕ್ಕಳಿಗೆ ನಗದು ಬಹುಮಾನ ನೀಡಿ, ಸನ್ಮಾನಿಸಲಾಯಿತು.



ನವೋದಯ ಗ್ರಾಮ ವಿಕಾಸ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಚಂದಾಪೂರ ಸಹಕಾರಿಯ ವಾರ್ಷಿಕ ಮಹಾಸಭೆ.




ಶ್ರೀ ಮಾತಾಜಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಸಹಕಾರಿಯ 4ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಡಿ.ವಿ.ಶಾಸ್ತ್ರಿಯವರು ಉದ್ಘಾಟಿಸಿದರು. ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಭಾಸ್ಕರ ಹೆಗಡೆ ಕಾಗೇರಿಯವರು ಉಪಸ್ಥಿತರಿದ್ದರು.

ನವೋದಯ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಮಂಗಳೂರು ಸಹಕಾರಿಯ 9ನೇ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಅಧ್ಯಕ್ಷರಾದ ಡಾ. ಎಂ.ಎನ್. ರಾಜೇಂದ್ರ ಕುಮಾರ್‌ರವರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಂದರ್ಭದಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ರಾಜು ಪುಜಾರಿ, ನಿರ್ದೇಶಕರುಗಳಾದ ಶ್ರೀ ಭಾಸ್ಕರ್ ಎಸ್. ಕೋಟ್ಯಾನ್, ಶ್ರೀ ಕಿಶನ್ ಹೆಗ್ಡೆ ಕೊಳ್ಕೆಬೈಲ್, ಶ್ರೀ ಸುಂದರ ಗೌಡ ಇಚ್ಚಿಲ, ಲೆಕ್ಕ ಪರಿಶೋಧಕರುಗಳಾದ ಶ್ರೀ ಪಿ. ನರೇಂದ್ರ ಪೈ, ಪಿ.ಎ. ಸುಮನಾ, ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ವಾಸು ಇವರುಗಳು ಉಪಸ್ಥಿತರಿದ್ದರು.





ಶ್ರೀ ಕಾಮಾಕ್ಷಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಗಂಗಾವತಿ ಸಹಕಾರಿಯ 1ನೇ ವಾರ್ಷಿಕ ಸಾಮಾನ್ಯ ಸಭೆ



ಶ್ರೀ ಶಿವಾಜಿ ಮಹಾರಾಜ ಕೋ ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿ., ವಿಜಯಪುರ ಸಹಕಾರಿಯ 2014–15ನೇ ಸಾಲಿನ 19ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ.



ಶ್ರೀ ಪಂಚಶಕ್ತಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಮೂಡುಬಿದಿರೆ ಸಹಕಾರಿಯ ಮಹಾಸಭೆ.



ಶ್ರೀ ಚೆನ್ನಬಸವೇಶ್ವರ ಸ್ವಾಮಿ ಸೌಹಾರ್ದ ಪತ್ತಿನ ಸಹಕಾರಿ ನಿ., ತಿಪಟೂರು ಸಹಕಾರಿಯ 9ನೇ ವಾರ್ಷಿಕ ಸಾಮಾನ್ಯ ಸಭೆ.



ವಿಪ್ರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಧಾರವಾಡ ಸಹಕಾರಿಯ ಸರ್ವಸದಸ್ಯರ ವಾರ್ಷಿಕ ಸಭೆಯು ಸಹಕಾರಿಯ ಅಧ್ಯಕ್ಷರಾದ ಶ್ರೀ ವೆಂಕಟೇಶ ದೇಸಾಯಿಯವರ ಅಧ್ಯಕ್ಷತೆಯಲ್ಲಿ ಜರುಗಿತು.



ಶ್ರೀ ರೇಣುಕಾದೇವಿ ಮಹಿಳಾ ಸೌಹಾರ್ದ ಪತ್ತಿನ ಸಹಕಾರಿ ನಿ., ತುಮಕೂರು ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ.



ಶಿಖಾಪುರಿ ಪತ್ತಿನ ಸೌಹಾರ್ದ ಸಹಕಾರಿ ನಿ., ಕೊಟ್ಟೂರು ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ.



ಶ್ರೀ ಕಾಮದೇನು ಮಹಿಳಾ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಮುನವಳ್ಳಿ ಸಹಕಾರಿಯ 2ನೇ ವಾರ್ಷಿಕ ಸರ್ವ ಸಾಧಾರಣ ಸಭೆ.

ಉದಯ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಂಗಳೂರು ಸಹಕಾರಿಯ 20ನೇ ವಾರ್ಷಿಕ ಸರ್ವ ಸದಸ್ಯರ ಸಭೆಯು ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಎಸ್.ಗುಂಡುರಾವ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸರ್ವ ಸದಸ್ಯರ ಸಭೆಯ ಪೂರ್ವದಲ್ಲಿ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುವ ಶ್ರೀ ಎ.ಟಿ.ರಾಮಸ್ವಾಮಿ, ಮಾಜಿ ಶಾಸಕರು, ಶ್ರೀ ಬೆಂಗಳೂರು ನಾಗೇಶ್, ಚಲನಚಿತ್ರ ನಟರು, ರಾಷ್ಟ್ರೀಯ ಸೈಕ್ಲಿಂಗ್ ಕ್ರೀಡಾಪಟುಗಳಾದ ಕು. ಮಾದಪ್ಪ ಮಾಣಿಕ್ ಖುರ್ನಿ, ಕು. ಸೀಮಾ ಪರಶುರಾಮ್ ಅಡಗಲ್ ಮತ್ತು ಕು. ರೇಣುಕಾ ಪ್ರಹ್ಲಾದ್ ದಂಡಿನ ಹಾಗೂ ಸಹಕಾರಿಯ 10 ಹಿರಿಯ ಸದಸ್ಯರುಗಳಿಗೆ ಸ್ಮರಣಿಕೆ ಮತ್ತು ನಗದು ಗೌರವ ನೀಡುವ ಮೂಲಕ ಸನ್ಮಾನಿಸಲಾಯಿತು.





ಶ್ರೀ ಗುರು ಸೌಹಾರ್ದ ಪತ್ತಿನ ಸಹಕಾರಿ ನಿ., ಕಲಬುರಗಿ ಸಹಕಾರಿಯ 4ನೇ ವಾರ್ಷಿಕ ಸಾಮಾನ್ಯ ಸಭೆ.



ಶ್ರೀಮಾತಾ ವೈಭವ ಮಹಾಲಕ್ಷ್ಮೀ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಕುಮಟಾ ಸಹಕಾರಿಯ 10ನೇ ವಾರ್ಷಿಕ ಸರ್ವ ಸದಸ್ಯರ ಸಭೆ. ಈ ಸಂದರ್ಭದಲ್ಲಿ ಶಿಕ್ಷಕರಾದ ಶ್ರೀ ರಾಮಕೃಷ್ಣ ವಿಠೋಬ ಗಾವಡಿ ಅಳವೇಕೋಡಿ, ಕುಮಟಾ ಇವರನ್ನು ಸಹಕಾರಿ ವತಿಯಿಂದ ಸನ್ಮಾನಿಸಲಾಯಿತು.



ಶ್ರೀ ಮಹಾಗಣಪತಿ–ಮಹಾಸತಿ (ಎಮ್.ಜಿ.ಎಮ್) ಸೌಹಾರ್ದ ಪತ್ತಿನ ಸಹಕಾರಿ ನಿ., ಸರ್ಪನಕಟ್ಟೆ ಸಹಕಾರಿಯ ವತಿಯಿಂದ ದಿನಾಂಕ 02.10.2015ರಂದು ಗಾಂಧೀ ಜಯಂತಿ ಪ್ರಯುಕ್ತ ಮುರವರ್ಗ ಗ್ರಾಮದಲ್ಲಿ ಸ್ವಚ್ಛತಾ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.



ಶ್ರೀಗಂಧ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿ., ಸಾಗರ ಸಹಕಾರಿಯ ವಾರ್ಷಿಕ ಸಭೆ.



ದಿ ನಿರಂತರ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಮುರಗೋಡ ಸಹಕಾರಿಯಿಂದ ಮುರಗೋಡ ಗ್ರಾಮದ ಹೊರಟ್ಟಿ ಓಣಿ ವ್ಯಾಪ್ತಿಯಲ್ಲಿ ಬರುವ ಅಂಗನವಾಡಿ ಕೇಂದ್ರ–3ರಲ್ಲಿ ಅಂಗನವಾಡಿ ಆರೋಗ್ಯ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು.



ಶ್ರೀ ಸಿದ್ಧಭಾರತಿ ಸೌಹಾರ್ದ ಸಹಕಾರಿ ನಿ., ಬೀದರ್ ಸಹಕಾರಿಯ ಉದ್ಘಾಟನಾ ಸಮಾರಂಭ.

## ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ ಸಹಕಾರಿಯ ಸಿಬ್ಬಂದಿಗಳಿಗಾಗಿ ತರಬೇತಿ ಕಾರ್ಯಾಗಾರ



ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ ಇದರ ಸಿಬ್ಬಂದಿಗಳಿಗಾಗಿ ತರಬೇತಿ ಕಾರ್ಯಾಗಾರವನ್ನು ದಿನಾಂಕ 02.10.2015 ಹಾಗೂ 10.10.2015ರಂದು ರೋಟರಿ ಕಾಂಪ್ಕೋ ಬ್ಲಡ್ ಬ್ಯಾಂಕ್ ಸಭಾಭವನದಲ್ಲಿ ಆಯೋಜಿಸಲಾಗಿತ್ತು.

ದಿನಾಂಕ : 02.10.2015ರಂದು ತರಬೇತಿ ಕಾರ್ಯಾಗಾರದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಆರ್ ಸತೀಶ್ಚಂದ್ರರವರು ವಹಿಸಿದ್ದರು. ಕಾರ್ಯಕ್ರಮದ ಉದ್ಘಾಟನೆಯನ್ನು ವಿವೇಕಾನಂದ ಪದವಿ ಪೂರ್ವ ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷರಾದ ಶ್ರೀ ಶ್ರೀನಿವಾಸ ಪೈ ನೆರವೇರಿಸಿದರು. ಕಾರ್ಯಕ್ರಮಕ್ಕೆ ದಕ್ಷ ಕನ್‌ಸ್ಟ್ರಕ್ಷನ್‌ನ ಮಾಲೀಕರಾದ ಶ್ರೀ ರವೀಂದ್ರ ರೈ ರವರು ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. ಸಹಕಾರಿಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಭವಾನಿ ಪ್ರಭು ಉಪಸ್ಥಿತರಿದ್ದರು. ತರಬೇತುದಾರರು ಹಾಗೂ ಮಂಗಳೂರಿನ ಪ್ರಸಿದ್ಧ ಚಾರ್ಟರ್ಡ್ ಅಕೌಂಟೆಂಟ್ ಆಗಿರುವ ಶ್ರೀ ಎಸ್.ಎಸ್.ನಾಯಕ್‌ರವರು "ಮಾನವ ಸಂಪನ್ಮೂಲ ಅಭಿವೃದ್ಧಿ" ವಿಷಯದ ಬಗ್ಗೆ ತರಬೇತಿಯನ್ನು ನೀಡಿದರು.

ದಿನಾಂಕ : 10.10.2015ರಂದು ತರಬೇತಿ ಕಾರ್ಯಾಗಾರದ ಅಧ್ಯಕ್ಷತೆಯನ್ನು ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಅನಂತಕೃಷ್ಣ ನಾಯಕ್‌ರವರು ವಹಿಸಿದ್ದರು. ಕಾರ್ಯಕ್ರಮದ ಉದ್ಘಾಟನೆಯನ್ನು ಪುತ್ತೂರಿನ ಹಿರಿಯ ನೋಟರಿ ವಕೀಲರಾದ ಶ್ರೀ ನಿರ್ಮಲ ಕುಮಾರ್ ಜೈನ್‌ರವರು ನೆರವೇರಿಸಿದರು. ಕಾರ್ಪೋರೇಶನ್ ಬ್ಯಾಂಕಿನ ನಿವೃತ್ತ ಹಿರಿಯ ಶಾಖಾ ವ್ಯವಸ್ಥಾಪಕರಾದ ಶ್ರೀ ಎಸ್. ಆರ್.ನಾಯಕ್ ಹಾಗೂ ಸಹಕಾರಿಯ ಪ್ರಧಾನ ವ್ಯವಸ್ಥಾಪಕರಾದ ಶ್ರೀ ವಸಂತ್ ಎ.ಉಪಸ್ಥಿತರಿದ್ದರು.

## ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ (ರಿ.), ಪುತ್ತೂರು ಇದರ ವತಿಯಿಂದ ಸ್ವಚ್ಛ ಭಾರತ್ ಕುರಿತಾದ ಮಾಹಿತಿ ಕಾರ್ಯಾಗಾರ ಮತ್ತು ಕಸದ ಬುಟ್ಟಿಗಳ ಕೊಡುಗೆ ಹಾಗೂ ಸಾಮಾಜಿಕ ನಡವಳಿಕೆ ಕುರಿತಾದ ಮಾಹಿತಿ ಕಾರ್ಯಾಗಾರ

ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಸಹ ಸಂಸ್ಥೆಯಾದ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ ಇದರ ವತಿಯಿಂದ ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಪುತ್ತೂರು ಇಲ್ಲಿ ಸ್ವಚ್ಛ ಭಾರತ್ ಕುರಿತಾದ ಮಾಹಿತಿ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು. ಕಾರ್ಯಾಗಾರದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಕ್ಸೇವಿಯರ್ ಡಿಸೋಜರವರು ವಹಿಸಿದ್ದರು.

ಮುಖ್ಯ ಅತಿಥಿಯಾಗಿ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ನಿರ್ದೇಶಕರಾದ ಶ್ರೀ ಪದ್ಮನಾಭ ಬೋರ್ಕರ್‌ರವರು ಆಗಮಿಸಿದ್ದರು. ಸಹಕಾರಿಯ ಹಿರಿಯ ಅಧಿಕಾರಿ ಶ್ರೀ ಶಿವಪ್ರಸಾದ್ ಟಿ ರವರು ಮಾಹಿತಿ ನೀಡಿದರು. ಟ್ರಸ್ಟ್ ವತಿಯಿಂದ ಕಾಲೇಜಿಗೆ ಕಸದ ಬುಟ್ಟಿಗಳನ್ನು ಕೊಡುಗೆಯಾಗಿ ನೀಡಲಾಯಿತು.

ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಸಹ ಸಂಸ್ಥೆ ಶ್ರೀ



ಸರಸ್ವತಿ ಚಾರಿಟೇಬಲ್ ಟ್ರಸ್ಟ್ ಇದರ ವತಿಯಿಂದ ಸಚ್ಚಿದಾನಂದ ಸೇವಾ ಸದನ, ವಿನಾಯಕ ನಗರ, ದರ್ಬೆ, ಪುತ್ತೂರು ಇಲ್ಲಿ ಸಾಮಾಜಿಕ ನಡವಳಿಕೆ ಕುರಿತಾದ ಮಾಹಿತಿ ಕಾರ್ಯಾಗಾರವು ದಿನಾಂಕ 23-10-2015 ರಂದು ನಡೆಯಿತು. ಕಾರ್ಯಾಗಾರದ ಅಧ್ಯಕ್ಷತೆಯನ್ನು ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶ್ಚಂದ್ರರವರು ವಹಿಸಿದ್ದರು.



### ಅಭಿನಂದನೆ

ಸಹಕಾರ ಮಹಾಮಂಡಳದ ನೂತನ ಅಧ್ಯಕ್ಷರಾದ ಶ್ರೀ ಶೇಖರಗೌಡ ಮಾಲಿ ಪಾಟೀಲ್ ಹಾಗೂ ನಿರ್ದೇಶಕರಾಗಿ ಆಯ್ಕೆಯಾಗಿರುವ ಶ್ರೀ ಬಸವರಾಜ ಎಸ್. ಸುಲ್ತಾನಪುರಿ ಇವರಿಗೆ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಪರವಾಗಿ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯವರಿಂದ ಅಭಿನಂದನೆ.

## ಪ್ರಣವ ಸೌಹಾರ್ದ ಸಹಕಾರಿಯಿಂದ ಉಚಿತ ದಂತ ತಪಾಸಣೆ ಹಾಗೂ ರಕ್ತದಾನ ಶಿಬಿರ




ಪ್ರಣವ ಸೌಹಾರ್ದ ಸಹಕಾರಿ ನಿ., ಮಂಗಳೂರು ಸಹಕಾರಿಯು ಸ್ಥಳೀಯ ಸಂಸ್ಥೆಯಾದ ಜೈ ಶಂಕರ ಮಂಡಳಿ ಸಹಯೋಗದೊಂದಿಗೆ ವಾಮಂಜೂರು, ಮಂಗಳೂರು ಇಲ್ಲಿ ದಂತ ತಪಾಸಣೆ ಮತ್ತು ರಕ್ತದಾನ ಶಿಬಿರವನ್ನು ಕ್ಯಾಂಪ್ಕೋ ಸಂಸ್ಥೆಯ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಸ್.ಆರ್.ಸತೀಶ್ಚಂದ್ರರವರು ಉದ್ಘಾಟಿಸಿದರು. ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ.ಆರ್.ಪ್ರಸಾದ್ ಮತ್ತು ನಿರ್ದೇಶಕರುಗಳು ಉಪಸ್ಥಿತರಿದ್ದರು.

## ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ಪ್ರಾರಂಭ



ಇದೇ ಸಂದರ್ಭದಲ್ಲಿ ನಿರ್ಮಾಣ್ ವಿವಿಧೊದ್ದೇಶ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ನಿತ್ಯಾನಂದ ನಾಯಕ್ ಮಂಚಿ ಮತ್ತು ಇನ್ನಂಜೆ ಸಿ.ಎ. ಬ್ಯಾಂಕಿನ ನಿವೃತ್ತ ಜಿಎಂ ಶ್ರೀ ಪರಮೇಶ್ವರ ಅಧಿಕಾರಿಯವರನ್ನು ಸನ್ಮಾನಿಸಲಾಯಿತು.

ಉಡುಪಿ ಜಿಲ್ಲೆಯಲ್ಲಿ ಪ್ರಸ್ತುತವಾಗಿ ನೂರಕ್ಕೂ ಹೆಚ್ಚು ಸೌಹಾರ್ದ ಸಹಕಾರಿ ಸಂಸ್ಥೆಗಳು ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ ರಚನೆಗೊಂಡು ಬ್ಯಾಂಕಿಂಗ್ ಮತ್ತು ಬ್ಯಾಂಕೇತರ ಸೇವೆಗಳನ್ನು ಸಾರ್ವಜನಿಕರಿಗೆ ನೀಡಿ, ಉತ್ತಮ ಜನ ಮನ್ನಣೆ ಗಳಿಸಿದೆ. ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಿ ಪ್ರತಿಯೊಂದು ಜಿಲ್ಲೆಯಲ್ಲಿ ಜಿಲ್ಲಾ ಒಕ್ಕೂಟ ರಚನೆಗೆ ಅವಕಾಶವಿದ್ದು, ಅದೇ ರೀತಿಯಲ್ಲಿ ಉಡುಪಿ ಜಿಲ್ಲೆಯಲ್ಲಿರುವ ಸೌಹಾರ್ದ ಸಹಕಾರಿ ಸಂಸ್ಥೆಯ ಸಹಕಾರಿಗಳ, ಗ್ರಾಹಕರ ಸರ್ವತೋಮುಖ ಅಭಿವೃದ್ಧಿಗಾಗಿ ಜಿಲ್ಲೆಯ ಸಹಕಾರಿಗಳ ಒಕ್ಕೂಟದ ಅತ್ಯಗತ್ಯ ಕಂಡು ಬಂದಿದೆ.

ಈ ಸೌಹಾರ್ದ ಸಹಕಾರಿ ಒಕ್ಕೂಟದ ಧ್ಯೇಯೋದ್ದೇಶಗಳು ಜಿಲ್ಲೆಯಾದ್ಯಂತ ಪಸರಿಸಿ, ಸೌಹಾರ್ದ ಸಹಕಾರಿ ಸಂಸ್ಥೆಗಳ ಸಿಬ್ಬಂದಿಗಳ ತರಬೇತಿ, ಏಕರೂಪ ಸೇವಾ ನಿಯಮಗಳು, ಬೈಲಾಸ್ ಇತ್ಯಾದಿ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಂಸ್ಥೆ ಸಂಪನ್ಮೂಲ ಕ್ರೋಢೀಕರಿಸಿ, ಸೂಕ್ತ ಗ್ರಾಹಕ-ಸಹಕಾರಿ ಫಲಾನುಭವಿಗಳಿಗೆ ಆಡಳಿತ ಮಂಡಲಿಯ ಮೂಲಕ ನಿರ್ಣಯಿಸಿ, ಆರ್ಥಿಕ ಮುಗ್ಗಟ್ಟಿನ ಹಿನ್ನಡೆ ಕಂಡುಬರುವ ಸಾಧ್ಯತೆ ಕಡಿಮೆ. ಸಾರ್ವಜನಿಕ ಹಿತದೃಷ್ಟಿಯಿಂದ ಸೌಹಾರ್ದ ಸಹಕಾರಿ ಸಂಸ್ಥೆಗಳಿಗೆ ವಿಶೇಷ ಅಧಿಕಾರವನ್ನು ರಾಜ್ಯ ಸರಕಾರ ಅನುವು ಮಾಡಿ ಕೊಟ್ಟಲ್ಲಿ ಗ್ರಾಹಕರಿಗೆ ಹಾಗೂ ಸಾರ್ವಜನಿಕ ಬಂಧು ಮಿತ್ರರಿಗೆ ಪಹಣಿ ವಿತರಣಾ ಕೇಂದ್ರವಾಗಿ ಮೂಡಿ ಬಂದು ತನ್ಮೂಲಕ ಜನತೆಗೆ ನ್ಯಾಯ ಕೊಡಿಸಲು ಬದ್ಧರಾಗಿರಬಹುದು.

ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ನಿಯಮಿತವು ರಾಜ್ಯದ ನಾಲ್ಕನೆಯ ಸಹಕಾರಿ ಒಕ್ಕೂಟವಾಗಿದ್ದು, ಅಕ್ಟೋಬರ್ 14ರಂದು ಉದ್ಘಾಟನೆಗೊಂಡು, ಕಾರ್ಯಾರಂಭವಾಗಿದೆ ಹಾಗೂ ಜಿಲ್ಲೆಯಾದ್ಯಂತ ಸಹಕಾರಿ ಕ್ಷೇತ್ರಗಳಲ್ಲಿ ಸರ್ವತೋಮುಖ ಅಭಿವೃದ್ಧಿಗಾಗಿ ದಾಪುಗಾಲು ಹಾಕಲು ಆರಂಭಿಸಿದೆ. ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟದ ರಚನೆಯ ಪೂರ್ವದಲ್ಲಿ ಪ್ರವರ್ತಕರಾಗಿ ನಂತರ ಸದಸ್ಯರಾಗಿ ನಿಸ್ವಾರ್ಥ ಸೇವೆ ಸಲ್ಲಿಸಿ, ಈಗ ನೋಂದಣಿಯಾಗಿ ಜಿಲ್ಲೆಯ ಜಿಲ್ಲಾ ಸೌಹಾರ್ದ ಸಂಸ್ಥೆಗಳೊಂದಿಗೆ ಕಾರ್ಯಪವರ್ತಕರಾಗಲು ಕಟಿಬದ್ಧವಾಗಿದೆ ಎಂದು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಭಾಸ್ಕರ ಕಾಮತ್ ತಿಳಿಸಿದರು.

ನಿಮ್ಮ ಪ್ರಶ್ನೆ – ನಮ್ಮ ಉತ್ತರ ಈ ಅಂಕಣವನ್ನು ಪ್ರತಿ ಸಂಚಿಕೆಯಲ್ಲಿ ಪ್ರಕಟಿಸಲು ನಿರ್ಧರಿಸಲಾಗಿದೆ. ಸೌಹಾರ್ದ ಸಹಕಾರಿಗಳು ತಮ್ಮ ದಿನನಿತ್ಯದ ಕಾರ್ಯಾಚರಣೆಯಲ್ಲಿ ಎದುರಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಅವುಗಳನ್ನು ಪ್ರಶ್ನೆಗಳ ರೂಪದಲ್ಲಿ ಸಂಯುಕ್ತ ಸಹಕಾರಿಗೆ ಲಿಖಿತವಾಗಿ ಕಳುಹಿಸಲು ಕೋರಿದೆ. ನಿಮ್ಮ ಪ್ರಶ್ನೆಗೆ ಸಂಯುಕ್ತ ಸಹಕಾರಿಯು ನೀಡಿದ ಉತ್ತರ ಬೇರೆ ಸೌಹಾರ್ದ ಸಹಕಾರಿಗಳಿಗೂ ಮಾರ್ಗದರ್ಶನವಾಗುತ್ತದೆ – ಸಂಪಾದಕರು

# ನಿಮ್ಮ ಪ್ರಶ್ನೆ




# ನಮ್ಮ ಉತ್ತರ

– ಶ್ರೀಕಾಂತ ಬರುವೆ

**1. ವೃತ್ತಿಪರ ನಿರ್ದೇಶಕರು ಹಾಗೂ ಕಾರ್ಯಾನುಗುಣ ನಿರ್ದೇಶಕರನ್ನು ಕಡ್ಡಾಯವಾಗಿ ಆಡಳಿತ ಮಂಡಲಿಗೆ ತೆಗೆದುಕೊಳ್ಳಬೇಕೇ?**

**ಉತ್ತರ :** ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 24 (1)ರನ್ವಯ ಸಹಕಾರಿಯ ಆಡಳಿತ ಮಂಡಲಿಯಲ್ಲಿ ಬ್ಯಾಂಕಿಂಗ್, ವ್ಯವಸ್ಥಾಪನೆ ಮತ್ತು ಹಣಕಾಸು ನಿರ್ವಹಣೆಯಲ್ಲಿ ಅನುಭವವಿರುವ ಅಥವಾ ಸಹಕಾರಿಯು ಕೈಗೊಂಡ ಚಟುವಟಿಕೆಗಳಿಗೆ ಮತ್ತು ಉದ್ದೇಶಗಳಿಗೆ ಸಂಬಂಧಿಸಿದ ಇತರೆ ಯಾವುದೇ ಕ್ಷೇತ್ರದಲ್ಲಿ ಪರಿಣತಿಯನ್ನು ಹೊಂದಿರುವ ಇಬ್ಬರಿಗೆ ಮೀರದ ವ್ಯಕ್ತಿಗಳನ್ನು ಸಹಮತದ ಮೂಲಕ ಸೇರಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ. ಆದರೆ, ಸಹಕಾರಿಯ ಆಡಳಿತ ಮಂಡಲಿಯಲ್ಲಿ ಮೂರಕ್ಕೆ ಮೀರದ ಸಂಖ್ಯೆಯ ಕಾರ್ಯಾನುಗುಣ ನಿರ್ದೇಶಕರನ್ನು ಸಹಕಾರಿಯು ಹೊಂದುವುದು ಕಡ್ಡಾಯವಾಗಿರುವುದಿಲ್ಲ. ಅವಶ್ಯವಿದ್ದಲ್ಲಿ ಮಾತ್ರ ಹೊಂದಬಹುದಾಗಿರುತ್ತದೆ.

**2. ವೃತ್ತಿಪರ ನಿರ್ದೇಶಕರು ಹಾಗೂ ಕಾರ್ಯಾನುಗುಣ ನಿರ್ದೇಶಕರು ಶೇರುದಾರರಾಗಿರಬಹುದೇ? ಶೇರುದಾರರು ಆದವರು, ಆಗದಿದ್ದವರು ವ್ಯತ್ಯಾಸವೇನು?**

**ಉತ್ತರ :** ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರಲ್ಲಿ ವೃತ್ತಿಪರ ನಿರ್ದೇಶಕರು ಹಾಗೂ ಕಾರ್ಯಾನುಗುಣ ನಿರ್ದೇಶಕರು ಸಹಕಾರಿಯ ಸದಸ್ಯರಾಗುವ/ ಶೇರುದಾರರಾಗುವ ಕುರಿತು ಯಾವುದೇ ಉಲ್ಲೇಖವಿರುವುದಿಲ್ಲ. ಸಹಕಾರಿಯಲ್ಲಿನ ವೃತ್ತಿಪರ ನಿರ್ದೇಶಕರು ವಿಷಯಾಧಾರಿತವಾಗಿ ಸಹಕಾರಿಯ ಹಿತಾಸಕ್ತಿ/ ಬೆಳವಣಿಗೆಗೆ ಪೂರಕವಾಗಿ ಸಲಹೆಗಳನ್ನು ನೀಡ ಬೇಕಾಗುತ್ತದೆ. ಆದರೆ, ಸಹಕಾರಿಯ ಸದಸ್ಯನಾಗಿರುವ ವ್ಯಕ್ತಿಯು ಕೇವಲ ಸ್ವ–ಹಿತಾಸಕ್ತಿ ಪ್ರಚೋದಿತ ಸಲಹೆಗಳನ್ನು ನೀಡುವ ಮತ್ತು ಅಭಿಪ್ರಾಯವನ್ನು ವ್ಯಕ್ತಪಡಿಸುವ ಸಂಭವವಿರುವುದರಿಂದ ವೃತ್ತಿಪರ ನಿರ್ದೇಶಕರು ಸದಸ್ಯರಾಗಿರುವುದು ಸೂಕ್ತವಲ್ಲ. ಅಲ್ಲದೇ, ಸಹಕಾರಿಯ ಉಪವಿಧಿಯಲ್ಲಿ ವೃತ್ತಿಪರ ನಿರ್ದೇಶಕರಾಗುವವರು ಹಾಗೂ ಕಾರ್ಯಾನುಗುಣ ನಿರ್ದೇಶಕರಾಗುವವರು ಸಹಕಾರಿಯ ಸದಸ್ಯರಾಗಿ ಮುಂದುವರಿಯುವಂತಿಲ್ಲವೆಂಬ ಪ್ರಾವಧಾನವಿದ್ದಲ್ಲಿ, ಸಹಕಾರಿಯ ಸದಸ್ಯರಾಗಿದ್ದುಕೊಂಡು ವೃತ್ತಿಪರ ಅಥವಾ ಕಾರ್ಯಾನುಗುಣ ನಿರ್ದೇಶಕರಾಗಿ ಮುಂದುವರಿಯಲು ಸಾಧ್ಯವಿರುವುದಿಲ್ಲ.

**3. ಸೌಹಾರ್ದ ಸಹಕಾರಿಯ ಉಪನಿಯಮಗಳ ರೀತಿಯಲ್ಲಿ ಅನರ್ಹತೆಗೆ ಒಳಗಾದಾಗ ಸದಸ್ಯ ಪುನಃ ಅರ್ಹತೆ ಹೊಂದಲು ಅಧಿನಿಯಮದಲ್ಲಿ ಯಾವುದೇ ಅವಕಾಶವಿಲ್ಲ. ಈ ಬಗ್ಗೆ ಸ್ಪಷ್ಟನೆ ನೀಡಿ.**

**ಉತ್ತರ:** ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 20 (1) (ಎ)ರನ್ವಯ ಸದಸ್ಯತ್ವದ ಹೊಣೆಗಾರಿಕೆಗಳನ್ನು ಹೊರಲು ಸಿದ್ಧನಿರುವ ವ್ಯಕ್ತಿ ಮಾತ್ರ ಸಹಕಾರಿಯ ಸದಸ್ಯತ್ವವನ್ನು ಪಡೆದುಕೊಳ್ಳಬೇಕಾಗುತ್ತದೆ. ಸಹಕಾರಿಯ ಸದಸ್ಯತ್ವವನ್ನು ಪಡೆದುಕೊಂಡ ನಂತರ ಅದರೊಂದಿಗೆ ಬರುವ ಹೊಣೆಗಾರಿಕೆಯನ್ನು ನಿರ್ವಹಿಸುವುದು ಸದಸ್ಯನ ಕರ್ತವ್ಯವಾಗಿರುತ್ತದೆ. ಆದ್ದರಿಂದ, ಯಾವುದೇ ಸದಸ್ಯ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 20 (2) ಮತ್ತು ಸಹಕಾರಿಯ ಉಪವಿಧಿಯಲ್ಲಿ ತಿಳಿಸಿರುವ ಹೊಣೆಗಾರಿಕೆಯನ್ನು ನೆರವೇರಿಸಲು ತಪ್ಪಿದರೆ ಅಂತಹ ಸದಸ್ಯನು ಸದಸ್ಯತ್ವದಲ್ಲಿ ಮುಂದುವರಿಯಲು ಅನರ್ಹನಾಗುತ್ತಾನೆ.

ಅಧಿನಿಯಮ ಮತ್ತು ಉಪವಿಧಿಯಲ್ಲಿ ತಿಳಿಸಿರುವ ಕಾರಣಗಳಿಗೋಸ್ಕರ ಯಾವುದೇ ಸದಸ್ಯನು ಅನರ್ಹನಾದರೆ ಅಂತಹ ಸದಸ್ಯನು ಪುನಃ ಸದಸ್ಯನಾಗಲು ಅಧಿನಿಯಮದಲ್ಲಿ ಅವಕಾಶವಿರುವುದಿಲ್ಲ. ಒಂದು ವೇಳೆ ಸದಸ್ಯನಿಗೆ ಸಹಕಾರಿಯ ಸೇವೆ ಅಗತ್ಯವಾಗಿದ್ದಲ್ಲಿ ಅಂತಹ ಸದಸ್ಯನು ಸಹಕಾರಿಯ ಸದಸ್ಯತ್ವವನ್ನು ಪುನಃ ಪಡೆದುಕೊಳ್ಳಬೇಕಾಗುತ್ತದೆ.

**4. ಸಂಯುಕ್ತ ಸಹಕಾರಿಯಲ್ಲಿ ಒಂದು ಸಹಕಾರಿಯು ಅನರ್ಹತೆಗೊಂಡಾಗ, ಅರ್ಹತೆ ಹೇಗೆ, ಯಾವ ಕ್ರಮ ಕೈಗೊಳ್ಳುತ್ತೀರಿ?**

**ಉತ್ತರ :** ಯಾವುದೇ ಸಹಕಾರಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರಡಿ ನೋಂದಣಿ ಹೊಂದಿದ ಕೂಡಲೇ ಸಂಯುಕ್ತ ಸಹಕಾರಿಯ ಸದಸ್ಯತ್ವವನ್ನು ಪಡೆದುಕೊಳ್ಳುತ್ತದೆ. ಇಲ್ಲಿ ಸದಸ್ಯತ್ವ ಕಡ್ಡಾಯ ಸ್ವರೂಪದ್ದಾಗಿರುತ್ತದೆಯೇ ಹೊರತು ಐಚ್ಛಿಕವಾಗಿರುವುದಿಲ್ಲ. ಆದ್ದರಿಂದ, ಸಹಕಾರಿಯ ಸದಸ್ಯತ್ವಕ್ಕೆ ಯಾವುದೇ ಅನರ್ಹತೆ ಇರುವುದಿಲ್ಲ. ಸಹಕಾರಿಯು ಸಮಾಪನೆ ಹೊಂದಿದಾಗ ಮಾತ್ರ ಸಂಯುಕ್ತ ಸಹಕಾರಿಯಲ್ಲಿನ ಸದರಿ ಸಹಕಾರಿಯ ಸದಸ್ಯತ್ವ ರದ್ದಾಗುತ್ತದೆ. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 55ರಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕನಾಗಿ ಚುನಾಯಿತನಾಗಲು ಮತ್ತು ಮುಂದುವರಿಯಲು ಕೆಲವೊಂದು ಅನರ್ಹತೆಯನ್ನು ನಿಗದಿಪಡಿಸಲಾಗಿದೆ.

## ಶ್ರೀ ಎಂ.ಮುನಿರೆಡ್ಡಿಯವರು ಅಧ್ಯಕ್ಷರಾಗಿ ಮತ್ತು ಶ್ರೀ ಎನ್. ವೇಮಾರೆಡ್ಡಿಯವರು ಉಪಾಧ್ಯಕ್ಷರಾಗಿ ಆಯ್ಕೆ



ಶ್ರೀ ಎಂ.ಮುನಿರೆಡ್ಡಿ
ಅಧ್ಯಕ್ಷರು



ಶ್ರೀ ಎನ್. ವೇಮಾರೆಡ್ಡಿ
ಉಪಾಧ್ಯಕ್ಷರು

ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ನಿ., ಯಲಹಂಕ ಉಪನಗರ ಸಹಕಾರಿಯ 2015–16 ರಿಂದ 2019–20ನೇ ಸಾಲಿನ ಆಡಳಿತ ಮಂಡಲಿ ನಿರ್ದೇಶಕರ ಸ್ಥಾನಗಳಿಗೆ ದಿನಾಂಕ 21.09.2015ರಂದು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ ಮತ್ತು ಆಡಳಿತ ಮಂಡಲಿಯ ಪದಾಧಿಕಾರಿಗಳಾಗಿ ದಿನಾಂಕ 01.10.2015 ರಂದು ಶ್ರೀ ಎಂ.ಮುನಿರೆಡ್ಡಿಯವರು ಅಧ್ಯಕ್ಷರಾಗಿ ಮತ್ತು ಶ್ರೀ ಎನ್. ವೇಮಾರೆಡ್ಡಿಯವರು ಉಪಾಧ್ಯಕ್ಷರಾಗಿ ಮುಂದಿನ ಐದು ವರ್ಷಗಳಿಗೆ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.

## ಗೌಳಿಗರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಹೊಸಪೇಟೆ ಸಹಕಾರಿಯ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಆಯ್ಕೆ



ಶ್ರೀ ಗೌಳಿ ರುದ್ರಪ್ಪ
ಅಧ್ಯಕ್ಷರು



ಶ್ರೀ ಜಿ.ಎ.ನಾಗಪ್ಪ
ಉಪಾಧ್ಯಕ್ಷರು

## ನಾಮ ನಿರ್ದೇಶನ



ಗಂಗಾಕಾವೇರಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ತಿಪಟೂರು ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಬಿ.ಹರ್ಷ ಇವರನ್ನು ತುಮಕೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾಗಿ ಮಾನ್ಯ ರಾಜ್ಯಪಾಲರು ನಾಮ ನಿರ್ದೇಶನ ಮಾಡಿರುತ್ತಾರೆ.

## "ಯುವಜನತೆಗೆ ವಿಜ್ಞಾನ ಮತ್ತು ವೈಜ್ಞಾನಿಕ ಮನೋಭಾವನೆ" ಶಿಬಿರ



ದಿನಾಂಕ : 14.10.2015 ರಿಂದ 20.10.2015ರವರೆಗೆ ಏರ್ಪಡಿಸಲಾಗಿದ್ದ "ಯುವಜನತೆಗೆ ವಿಜ್ಞಾನ ಮತ್ತು ವೈಜ್ಞಾನಿಕ ಮನೋಭಾವನೆ" ಶಿಬಿರದ ಸಂದರ್ಭದಲ್ಲಿ ಉತ್ತರ ಕರ್ನಾಟಕ ಸಾಂಸ್ಕೃತಿಕ ವೇದಿಕೆ (ರಿ), ಶ್ರೀ ಕೂಡಲಸಂಗಮ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ತಾಲ್ಲೂಕು ಔಷಧಿ ವ್ಯಾಪಾರಿಗಳ ಸಂಘ, ನೆಲಮಂಗಲ ಸಹಯೋಗದಲ್ಲಿ : ದಿನಾಂಕ 16.10.2015ರಂದು "ಉಚಿತ ಆರೋಗ್ಯ ತಪಾಸಣಾ ಶಿಬಿರ ಮತ್ತು ಔಷಧಿ ವಿತರಣೆ" ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ವಿಮಲ ಮಹಿಳಾ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಬೆಳಗಾವಿ ಸಹಕಾರಿಯು ಸ್ನೇಹಾಲಯ (ಸ್ಪರ್ಶ) ಬುದ್ಧಿಮಾಂದ್ಯ ಮಕ್ಕಳ ಶಾಲೆಗೆ ಆರ್ಥಿಕ ಸಹಾಯ ನೀಡುವ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಆಡಳಿತ ಮಂಡಲಿಯ ಸದಸ್ಯರು ಹಾಗೂ ಸಂಸ್ಥಾಪಕರು ಉಪಸ್ಥಿತರಿದ್ದರು.



# ಸಹಕಾರಿ ಕ್ಷೇತ್ರದಲ್ಲಿ ಪರಿಣಾಮಕಾರಿ ನಾಯಕತ್ವ : ಭಾಗ-1 ನಾಯಕತ್ವ



ಶ್ರೀ ಬಿ.ಎ.ಮಹದೇವಪ್ಪ, ಸನ್ಮತಿ ಪ್ರತಿಷ್ಠಾನ, ಶಿವಮೊಗ್ಗ.

ಫ್ರಾನ್ಸಿನ ಸರ್ವಾಧಿಕಾರಿಯಾಗಿದ್ದ ನೆಪೋಲಿಯನ್ ತನ್ನ ಸೈನಿಕರನ್ನು "50000ಕ್ಕೆ... 1ನ್ನು ಸೇರಿಸಿದರೆ ಎಷ್ಟಾಗುತ್ತದೆ?" ಎಂದು ಕೇಳಿದ. ಎಲ್ಲರೂ: "50001" ಎಂದು ಉತ್ತರಿಸಿದರು. ಅದಕ್ಕೆ ನೆಪೋಲಿಯನ್: "ತಪ್ಪು! ಆ ಒಂದನ್ನು 50000ಕ್ಕೆ ಮೊದಲು ಸೇರಿಸಿದರೆ, 150000 ಆಗುತ್ತದೆ. ಆ ಒಂದು ನಾನೇ! ನಾನು ಸೇರಿದರೆ ನಿಮಗೆ ಲಕ್ಷಕ್ಕೂ ಹೆಚ್ಚಿನ ಬೆಲೆ ಬರುತ್ತದೆ. ಏಕೆಂದರೆ ನಾನು ನಾಯಕ!" ಎಂದು ಹೇಳಿದ.

ನಾಯಕತ್ವದ ಮಹತ್ವವನ್ನು ತಿಳಿದುಕೊಳ್ಳಲು ಬಹುಶಃ ಇದಕ್ಕಿಂತಲೂ ಬೇರೆ ಉದಾಹರಣೆ ಬೇಕಾಗುವುದಿಲ್ಲ.

ನಾಯಕನೆಂದರೆ... ಕೇವಲ ಒಂದು ಸಂಸ್ಥೆಯ ಯಜಮಾನ ಇಲ್ಲವೇ ರಾಜಕೀಯ ನಾಯಕನೆಂದು ತಿಳಿಯಬಾರದು. ಒಂದು ಶಾಲೆಯ ಹೆಡ್‌ಮಾಸ್ಟರ್, ಕಾಲೇಜ್ ಪ್ರಿನ್ಸಿಪಾಲ್, ಕಛೇರಿ ಮುಖ್ಯಸ್ಥ, ಬ್ಯಾಂಕ್ ಮ್ಯಾನೇಜರ್, ಅಂಗಡಿಯ ಯಜಮಾನ, ಸೂಪರ್‌ವೈಸರ್, ಒಂದು ಗುಂಪಿನ ಮುಖ್ಯಸ್ಥ, ಇಲ್ಲವೇ ಕುಟುಂಬದ ಯಜಮಾನ... ಇವರೆಲ್ಲರೂ ನಾಯಕರೇ. ನಾಲ್ಕು ಜನ ಕೆಲಸ ಮಾಡುವಂತೆ ಮಾರ್ಗದರ್ಶನ ಮಾಡುವ ಪ್ರತಿಯೊಬ್ಬ ವ್ಯಕ್ತಿಯೂ... ನಾಯಕನೇ. ಯಾರು ಬೇಕಾದರೂ ನಾಯಕರಾಗಬಹುದು. ಯಾವತ್ತೂ ಬೇಕಾದರೂ ನಾಯಕರಾಗಬಹುದು. ನಾಯಕರಾಗುವುದಕ್ಕೆ ವಯಸ್ಸಿನ ಇತಿ-ಮಿತಿ ಇಲ್ಲ. ಆದರೆ....!

- ವ್ಯವಹಾರ ಚತುರತೆ
- ಪ್ಲಾನಿಂಗ್
- ಉತ್ತಮ ಸಂವಹನ
- ಮೇಲ್ವಿಚಾರಣೆ
- ಟೀಂ-ವರ್ಕ್
- ಸ್ಥಿತಪ್ರಜ್ಞತೆ
- ಬದಲಾವಣೆಗೆ ಹೊಂದಿಕೊಳ್ಳುವುದು

...ಇವೇ ಮೊದಲಾದ ಗುಣಗಳನ್ನು ಹೊಂದಿರುವವರು ನಿಜವಾದ ನಾಯಕರೆನಿಸುತ್ತಾರೆ. ಯಾರೂ ಕೂಡ ಹುಟ್ಟುವಾಗಲೇ ಈ ಎಲ್ಲ ಗುಣಗಳನ್ನು ಮೈಗೂಡಿಸಿಕೊಂಡು ಹುಟ್ಟುವುದಿಲ್ಲ. ರಾತ್ರೋರಾತ್ರಿ... ಏಕಾಏಕಿ ನಾಯಕರಾಗಿ ಮೂಡಿಬರುವುದಿಲ್ಲ ಅಥವಾ ಮುಂಬೈನಿಂದ ಬೆಂಗಳೂರಿಗೆ ರೈಲಿನಲ್ಲಿ ಬರುವಾಗ, ರೈಲ್ವೇ ಸ್ಟೇಷನ್ನಿನಲ್ಲಿ ನಾಯಕತ್ವದ ಪುಸ್ತಕವನ್ನು ಖರೀದಿಸಿ, ಬೆಂಗಳೂರಿಗೆ ಬಂದಿಳಿಯುವುದರೊಳಗೆ ಆ ಪುಸ್ತಕವನ್ನು ಓದಿ... ನಾಯಕತ್ವವನ್ನು ಕಲಿಯುವಂತಹುದಲ್ಲ. ಏಕೆಂದರೆ ನಾಯಕತ್ವ ಎಂಬುದು... ವೃತ್ತಿಯಲ್ಲ. ಅದು ಜೀವನ ಶೈಲಿ. ಮೊದಲ ಸಾಲಿನಲ್ಲಿ ನಿಲ್ಲಲು... ಏನು ಮಾಡಬೇಕು? ಎಂಬುದನ್ನು ಮನದಟ್ಟು ಮಾಡಿಸುವ ಕಲೆ.

ನಾಯಕರಾಗಿ ರೂಪುಗೊಳ್ಳಲು ಅಪಾರ ಶ್ರದ್ಧೆ, ಪರಿಶ್ರಮ, ಹಟ, ಛಲ, ಪೂರ್ವಸಿದ್ಧತೆಗಳು ಬೇಕಾಗುತ್ತವೆ. ನಾನು ನನ್ನ ಕ್ಷೇತ್ರದಲ್ಲಿ ನಂ.1 ಆಗಬೇಕು ಎಂಬ ತುಡಿತ (burning desire) ಇರಬೇಕಾಗುತ್ತದೆ. ಚೆಸ್ ಆಟದಲ್ಲಿ... ನಿರಂತರ ಅಭ್ಯಾಸ ಮಾಡಿ ಪ್ರಾವೀಣ್ಯತೆ ಗಳಿಸಿಕೊಳ್ಳುವ ರೀತಿಯಲ್ಲಿ ನಾಯಕತ್ವದ ಲಕ್ಷಣಗಳನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿಯೇ "Leaders are made not born" ಎಂದು ಹೇಳಲಾಗಿದೆ.

ತರಬೇತಿ ಮತ್ತು ಒಳ್ಳೆಯ ಅಭ್ಯಾಸಗಳಿಂದ... ಪ್ರಾಣಿಗಳಲ್ಲಿ, ಗಿಡಮರಗಳಲ್ಲಿ ಬದಲಾವಣೆ ತರಬಹುದು. ಬೀದಿ ನಾಯಿಯನ್ನು ಪೊಲೀಸ್ ನಾಯಿಯಾಗಿ ಮಾರ್ಪಡಿಸಬಹುದು. ಕೋತಿ ಸಲಾಂ ಮಾಡುವುದು, ಗಿಣಿ ಮಾತನಾಡುವುದು, ಅಂಕು-ಡೊಂಕಾಗಿ ಬೆಳೆಯುವ ಪಡವಲಕಾಯಿಯನ್ನು ಕಲ್ಲು ಕಟ್ಟಿ ನೇರವಾಗಿ ಬೆಳೆಯುವಂತೆ ಮಾಡಲು ಸಾಧ್ಯವಿದೆ. ಅದೇ ರೀತಿ ನಾಯಕತ್ವದ ಗುಣಗಳನ್ನು ಸಹ ಹಂತ ಹಂತವಾಗಿ ಬೆಳೆಸಿಕೊಳ್ಳಬಹುದಾಗಿದೆ.

ಕೈಗಳಿಂದ ಕೆಲಸ ಮಾಡುವವರನ್ನು 'ಲೇಬರ್' ಎಂದು ಕರೆದರೆ, ಮೆದುಳಿನಿಂದ ಕೆಲಸ ಮಾಡುವವರನ್ನು 'ಇಂಜಿನಿಯರ್' ಎಂದು ಕರೆಯುತ್ತಾರೆ. ಅದೇ ರೀತಿ ಹೃದಯದಿಂದ ಕೆಲಸ ಮಾಡುವವರನ್ನು 'ಕಲಾವಿದ' ಎಂದೂ, ಆತ್ಮದಿಂದ ಕೆಲಸ ಮಾಡುವವರನ್ನು 'ಯೋಗಿ' ಎನ್ನುತ್ತಾರೆ. ಆದರೆ... ಈ ನಾಲ್ಕನ್ನೂ ಸೇರಿಸಿಕೊಂಡು ಕೆಲಸ ಮಾಡುವವರನ್ನು 'ನಾಯಕ' ಎಂದು ಕರೆಯುತ್ತಾರೆ.

ನಾಯಕನಾದವನು... ಈ ವ್ಯವಸ್ಥೆಯಲ್ಲಿ ನಾನೇನು ಮಾಡಬಲ್ಲೆ? ಈ ವ್ಯವಸ್ಥೆಯಿಂದ ನನಗೇನು ಬೇಕು? ಈ ವ್ಯವಸ್ಥೆಗೆ

ನಾನು ಹೇಗೆ ಸೂಕ್ತವಾಗುತ್ತೇನೆ? ಎಂದು ಆಲೋಚಿಸುತ್ತಾನೆ. ಅಮೆರಿಕಾದ ಮ್ಯಾನೇಜ್‌ಮೆಂಟ್ ಗುರು ಎನಿಸಿದ ಪೀಟರ್ ಡ್ರಕ್ಕರ್ 'ಏನು ಮಾಡಬೇಕು ಎಂದು ಹೇಳುವುದಕ್ಕಿಂತ, ಯಾವ ರೀತಿ ಕಾರ್ಯಗತಗೊಳಿಸುವುದು ಎಂಬುದನ್ನು ಕ್ರಿಯೆಯಲ್ಲಿ ತೋರಿಸುವವನೇ ನಾಯಕ' ಎಂದು ಹೇಳಿದ್ದಾರೆ. ಈ ಮಾತುಗಳನ್ನು ಒಪ್ಪುವುದಾದರೆ... ನಾಯಕ ಎಂದರೆ ಯಾರು? ಎಂಬ ಪ್ರಶ್ನೆಗೆ ಸಿಂಗಾಪುರದ ಲೀ ಕ್ವಾನ್ ಯ್ಯೂ ಮತ್ತು ಅಮೆರಿಕಾದ ಡಿ ಹೋಕ್ ಹಾಗೂ ನಮ್ಮ ದೇಶದ ಡಾ.ವರ್ಗೀಸ್ ಕುರಿಯನ್ ಮತ್ತು ಬಾಂಗ್ಲಾ ದೇಶದ ಮೊಹಮ್ಮದ್ ಯೂನಸ್ ಇವರುಗಳು ಮಾಡಿರುವ ಕೆಲಸಗಳು ಉತ್ತರ ನೀಡಬಲ್ಲವು.

ಲೀ ಕ್ವಾನ್ ಯ್ಯೂ ಆಧುನಿಕ ಸಿಂಗಾಪುರದ ನಿರ್ಮಾಪಕರು. ಕೊಳಕು ಬಂದರಿನಿಂದ ನಾತ ಬೀರುತ್ತಿದ್ದ ದೇಶವನ್ನು ಮಾಲಿನ್ಯರಹಿತ ದೇಶವನ್ನಾಗಿ ಮಾಡಲು ಆಲೋಚಿಸಿದರು. ಸಿಂಗಾಪುರದ ಜೀವಾಳವಾಗಿರುವ ಬಂದರು ಮಾರುಕಟ್ಟೆಯ ಪುನಃಶ್ಚೇತನದಿಂದ ಇಡೀ ದೇಶ ಉದ್ಧಾರವಾಗುತ್ತದೆ ಎಂಬುದನ್ನು ಮನಗಂಡರು. ಸಿಂಗಾಪುರವನ್ನು ವಿಶ್ವದ ನಂ.1 ದೇಶವನ್ನಾಗಿ ಮಾಡುತ್ತೇನೆಂದು ಘೋಷಿಸಿದರು. ಟ್ಯಾಕ್ಸಿ ಚಾಲಕರ ಮತ್ತು ಎಲ್ಲ ಕ್ಷೇತ್ರಗಳ ಮುಖ್ಯಸ್ಥರ ಸಭೆ ನಡೆಸಿದರು. ಕಂಡ ಕಂಡಲ್ಲಿ ಉಗುಳಿದರೆ, ಚ್ಯೂಯಿಂಗ್–ಗಮ್ ಚೆಲ್ಲಿದರೆ... ರಸ್ತೆಗಳು ಹೇಗೆ ಸುಂದರವಾಗಿರುತ್ತವೆ? ಎಂದು ತಿಳಿಹೇಳಿದರು. ದೇಶಕ್ಕೆ ಬರುವ ಪ್ರವಾಸಿಗರನ್ನು ಸರಿಯಾಗಿ ನೋಡಿಕೊಳ್ಳದಿದ್ದರೆ ಅವರೆಂದೂ ನಮ್ಮ ದೇಶದ ಬಗ್ಗೆ ಒಳ್ಳೆಯ ಮಾತುಗಳನ್ನು ಹೇಳುವುದಿಲ್ಲ ಎಂದು ಮನವರಿಕೆ ಮಾಡಿಕೊಟ್ಟರು. "ನಿಮ್ಮ ತ್ಯಾಗ ಅತ್ಯಮೂಲ್ಯ" ಎಂದು ತಿಳಿಸಿದರು. ಇಡೀ ವ್ಯವಸ್ಥೆಯ ಬಗ್ಗೆ ಜನರಲ್ಲಿ ನಂಬಿಕೆಯನ್ನು ಹುಟ್ಟಿಸಿದರು. ಅದಕ್ಕಿಂತ ಹೆಚ್ಚಾಗಿ ತಮ್ಮ ಮಾತು ಮತ್ತು ನಡವಳಿಕೆಗಳಲ್ಲಿ ಭರವಸೆಯನ್ನು ಮೂಡಿಸಿದರು.

ಇಂದು ಸಿಂಗಾಪುರ್, ಪೂರ್ವದ ಸ್ವಿಜರ್‌ಲ್ಯಾಂಡ್ ಆಗಿದೆ. ಸುಂದರ ರಸ್ತೆಗಳು, ಅತ್ಯುತ್ತಮ ಮೂಲಸೌಕರ್ಯ, ಅಂತಾರಾಷ್ಟ್ರೀಯ ಗುಣಮಟ್ಟದ ಸೇವೆಗಳು ಲಭ್ಯವಾಗಿವೆ. ಈ ದೇಶ ವಿಶ್ವದ ಅತ್ಯಾಧುನಿಕ ಪ್ರವಾಸಿ ತಾಣವಾಗಿದೆ. ಒಬ್ಬ ನಾಗರೀಕನ ಸಂಪಾದನೆ, ನಮ್ಮ ದೇಶದ ನಾಗರೀಕನಿಗಿಂತ ಶೇ.25ರಷ್ಟು ಹೆಚ್ಚು. ಈ ದೇಶದಲ್ಲಿ ಶೇ.80ರಷ್ಟು ಪ್ರಜೆಗಳು ಸ್ವಂತ ಮನೆಗಳನ್ನು ಹೊಂದಿದ್ದಾರೆ. ಈ ದೇಶದ ವಾಣಿಜ್ಯ ವ್ಯಾಪಾರಗಳಿಗೆ ಹೋಲಿಸಿದರೆ, ಭಾರತ ಮತ್ತು ಚೀನಾ ದೇಶಗಳು ಹಿಂದೆ ಉಳಿದಿವೆ. ಇಂತಹ ಪರಿವರ್ತನೆಗೆ ಕಾರಣರಾದವರು... ಲೀ




ಕ್ವಾನ್ ಯ್ಯೂ. ಇವರು ನಿಜವಾದ ನಾಯಕರು.

ಡೀ ಹೋಕ್ ಬ್ಯಾಂಕಿಂಗ್ ಕ್ಷೇತ್ರದ ಬದಲಾವಣೆಗೆ ನಾಂದಿ ಹಾಡಿದ ವ್ಯಕ್ತಿ. ಬ್ಯಾಂಕ್ ಹಾಗೂ ಹಣದ ಬಗ್ಗೆ ನಮ್ಮೆಲ್ಲರಲ್ಲಿದ್ದ ಭಾವನೆಯನ್ನೇ ಬದಲಾಯಿಸಿದ ಹರಿಕಾರರು. ಕೇವಲ ಡಿಪಾಸಿಟ್ ಸಂಗ್ರಹಣೆ, ಸಾಲ ನೀಡುವಿಕೆ, ಸಾಲ ವಸೂಲಾತಿ, ಲಾಭ ಗಳಿಕೆಯೇ ಬ್ಯಾಂಕುಗಳ ಕೆಲಸವಲ್ಲ. ಅಷ್ಟನ್ನು ಮಾಡಿದ ಮಾತ್ರಕ್ಕೆ ಅದು ಬ್ಯಾಂಕ್ ಅನಿಸುವುದಿಲ್ಲ... ಎಂದು ನಮಗೆ ಮನದಟ್ಟು ಮಾಡಿಕೊಟ್ಟರು. ಹಣ ಎಂದರೆ ಏನು? ಎಂದು ಕೇಳಿದರು. ಅದು ಕರೆನ್ಸಿ ನೋಟಿನ ರೂಪದಲ್ಲಿಯೇ ಇರಬೇಕಾ? ಅಥವಾ ಅದಕ್ಕಿಂತಲೂ ಹೆಚ್ಚಿನ ಅನುಕೂಲಗಳು ಇರುವುದು ಬೇಕಾ...? ಎಂದು ಪ್ರಶ್ನಿಸಿದರು. ಇಂದು ವಿಶ್ವದಾದ್ಯಂತ ಮನ್ನಣೆ ಪಡೆದಿರುವ 'ಪ್ಲಾಸ್ಟಿಕ್ ಹಣ'... ಕ್ರೆಡಿಟ್ ಕಾರ್ಡ್ ನೀಡಿ ಬ್ಯಾಂಕಿಂಗ್ ವ್ಯವಸ್ಥೆಯನ್ನೇ ಬದಲಾಯಿಸಿದರು. ಇವರು ನಮ್ಮ ನಿಜವಾದ ನಾಯಕರು.

ಡಾ.ವರ್ಗೀಸ್ ಕುರಿಯನ್ ನಮ್ಮ ದೇಶದ ಕ್ಷೀರ ಕ್ರಾಂತಿಯ ಪಿತಾಮಹ. ದೇಶದ ನಂ.1 ಬೇಬಿಫುಡ್ "ಅಮೂಲ್"ನ ಸೃಷ್ಟಿಕರ್ತ. ಮೆಟಲರ್ಜಿಕಲ್ ಇಂಜಿನಿಯರ್ ಆಗಿದ್ದ ಇವರು ಸಹಕಾರ ಕ್ಷೇತ್ರಕ್ಕೆ ಬರುವ ಮುನ್ನ, ಸ್ವಾತಂತ್ರ್ಯಪೂರ್ವದಲ್ಲಿ ನಡೆದ ಒಂದು ಘಟನೆಯನ್ನು ಇಲ್ಲಿ ಹೇಳಿದರೆ ತಪ್ಪಾಗಲಾರದು. ಅಂದಿನ ಬಾಂಬೆಯ ಬ್ರಿಟೀಷ್ ಕಾಲೋನಿಯಲ್ಲಿ, ಒಂದು ದಿನ ಇದ್ದಕ್ಕಿದ್ದಂತೆ ಹಲವು ಬ್ರಿಟೀಷ್ ಅಧಿಕಾರಿಗಳು ಅನಾರೋಗ್ಯದ ಕಾರಣದಿಂದ ಆಸ್ಪತ್ರೆಗೆ ದಾಖಲಾದರು. ಅವರು ಕುಡಿದ ಹಾಲು ಅವರ ಅನಾರೋಗ್ಯಕ್ಕೆ ಕಾರಣವೆಂದು ತಿಳಿದು ಬಂತು. ಆ ಹಾಲಿನ ಮಾದರಿಯನ್ನು



ಲೀ ಕ್ವಾನ್ ಯ್ಯೂ



ಡಾ.ವರ್ಗೀಸ್ ಕುರಿಯನ್

ವಿವರವಾಗಿ ಪರಿಶೀಲಿಸಲು ಲಂಡನ್ನಿನ ಪ್ರಯೋಗಾಲಯಕ್ಕೆ ಕಳಿಸಲಾಯಿತು. ಬಾಂಬೆಯ ಹಾಲು ಇಂಗ್ಲೆಂಡಿನ ಚರಂಡಿಯ ನೀರಿಗಿಂತ ಕಲುಷಿತವಾಗಿದೆ ಎಂದು ಲಂಡನ್ನಿನಿಂದ ಒಂದು ಸಾಲಿನ ವರದಿ ಬಂತು. ಇಂತಹ ಸನ್ನಿವೇಶದಲ್ಲಿ ಡಾ.ಕುರಿಯನ್‌ರವರು ಗುಜರಾತಿನ ಆನಂದ್‌ಗೆ ಬಂದು ಕೆಲಸ ಪ್ರಾರಂಭಿಸಿದ್ದು ಒಂದು ಇತಿಹಾಸ. ಇವರ ಕೆಲಸಗಳಲ್ಲಿ ಸಮಸ್ಯೆಗಳು ಉದ್ಭವಿಸಿದಾಗ ಇವರು ಡಿಪ್ರೆಶನ್ ಹೊಂದಲಿಲ್ಲ. ಯಾಕೆ ಈ ತಲೆನೋವೆಂದು ಪಲಾಯನ ಮಾಡಲಿಲ್ಲ. ಇಂದು ದೇಶದ ಮೂಲೆ ಮೂಲೆಗಳಲ್ಲಿ "ಹಾಲಿನ ಹೊಳೆ"ಯ ವಾತಾವರಣ ಕಂಡುಬರುತ್ತಿದ್ದು, ಹಾಲಿನ ಕೊರತೆ ಎಂದರೇನು? ಎಂದು ಕೇಳುವ ಮಟ್ಟಕ್ಕೆ ಹಾಲಿನ ಉತ್ಪಾದನೆಯಾಗುತ್ತಿದೆ. ವರ್ಷದ 365 ದಿನಗಳಲ್ಲೂ ಬೆಳಿಗ್ಗೆ ಮತ್ತು ಸಂಜೆ, ಯಾವುದೇ ಮಧ್ಯವರ್ತಿಗಳಿಲ್ಲದೇ... ಹಾಲು ಉತ್ಪಾದಕರಿಂದ ಹಾಲು ಸಂಗ್ರಹಣೆ ಮಾಡುತ್ತಿರುವುದರ ಜೊತೆಗೆ, ಉತ್ಪಾದಕರಿಗೆ ಉತ್ತಮ ಬೆಲೆಯನ್ನು ನೀಡಲಾಗುತ್ತಿದೆ.

ಗ್ರಾಮೀಣ ಮಹಿಳೆಯರಿಗೆ, ರೈತ ಬಂಧುಗಳಿಗೆ ಕೃಷಿಯ ನಂತರ ಒಂದು ಉಪಕಸುಬನ್ನು ಒದಗಿಸಿ, ಪಶುಸಂಗೋಪನೆ ಒಂದಿದ್ದರೆ... ಯಾರೂ ಹಸಿವಿನಿಂದ ಬಳಲುವುದಿಲ್ಲ ಎಂಬ ಆತ್ಮವಿಶ್ವಾಸ ಬರಲು ದಾರಿ ಮಾಡಿಕೊಟ್ಟವರು – ಡಾ.ವರ್ಗೀಸ್ ಕುರಿಯನ್ ಇವರು ನಮ್ಮ ನಾಯಕರು. (ಭಾಗ–2 ಮುಂದುವರೆದಿದೆ)

## ಡಿಸೆಂಬರ್ ಮಾಹೆಯ ಕಾರ್ಯಕ್ರಮಗಳು

**ರಾಜ್ಯದ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ 10 ದಿನಗಳ ವ್ಯಕ್ತಿತ್ವ ವಿಕಸನದ 14ನೇ ತಂಡದ ತರಬೇತಿ ಕಾರ್ಯಕ್ರಮ :** ರಾಜ್ಯದ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮದ 14ನೇ ತಂಡವನ್ನು ದಿನಾಂಕ 03.12.2015 ರಿಂದ 12.12.2015ರವರೆಗೆ ಕೃಷಿ ವಿಜ್ಞಾನ ಕೇಂದ್ರ, ಕೃಷಿ ವಿಶ್ವವಿದ್ಯಾಲಯ, ರಾಯಚೂರು ಜಿಲ್ಲೆ ಇಲ್ಲಿ ಆಯೋಜಿಸಲಾಗಿದೆ. ಸೌಹಾರ್ದ ಸಹಕಾರಿಗಳು ತಮ್ಮ ಸಂಸ್ಥೆಯ ಸಿಬ್ಬಂದಿಯವರನ್ನು ಕಳುಹಿಸಿಕೊಡಲು ಕೋರಿದೆ. ಮಹಿಳೆಯರಿಗೆ ಪ್ರತ್ಯೇಕ ವಸತಿ ವ್ಯವಸ್ಥೆ ಇರುತ್ತದೆ. ಪ್ರತಿನಿಧಿ ಶುಲ್ಕ ತಲಾ ರೂ. 5,000/– ಕಾರ್ಯಕ್ರಮಕ್ಕೆ ಬಂದು ಹೋಗುವ ಪ್ರಯಾಣ ವೆಚ್ಚವನ್ನು ಸಂಬಂಧಿಸಿದ ಸೌಹಾರ್ದ ಸಹಕಾರಿಗಳಿಂದ ಭರಿಸಬೇಕು. ನೋಂದಣಿಯ ಕೊನೆಯ ದಿನಾಂಕ : 21.11.2015.

**ಸೌಹಾರ್ದ ಸಹಕಾರಿಗಳ ಉಪಸಿಬ್ಬಂದಿ/ಅಟೆಂಡರ್/ಪ್ಯೂನ್ ರವರುಗಳಿಗೆ "ವೃತ್ತಿ ಪರಿಣಿತಿ" ತರಬೇತಿ ಕಾರ್ಯಕ್ರಮ :** ಸೌಹಾರ್ದ ಸಹಕಾರಿಗಳ ಉಪಸಿಬ್ಬಂದಿ/ ಅಟೆಂಡರ್/ ಪ್ಯೂನ್ ರವರುಗಳಿಗೆ "ವೃತ್ತಿ ಪರಿಣಿತಿ" ತರಬೇತಿಯನ್ನು ದಿನಾಂಕ : 04.12.2015ರಂದು ಕೃಷಿ ವಿಜ್ಞಾನ ಕೇಂದ್ರ, ಕೃಷಿ ವಿಶ್ವವಿದ್ಯಾಲಯ, ರಾಯಚೂರು ಜಿಲ್ಲೆ ಇಲ್ಲಿ ಆಯೋಜಿಸಲಾಗಿದೆ. ತಮ್ಮ ಸಹಕಾರಿಯ ಉಪಸಿಬ್ಬಂದಿಯವರನ್ನು ಕಳುಹಿಸಲು ಕೋರಿದೆ. ತರಬೇತಿಯ ಪ್ರವೇಶ ಶುಲ್ಕ ಒಬ್ಬರಿಗೆ ರೂ. 100/–.

**ಸಂವಾದ ಕಾರ್ಯಕ್ರಮ :** ರಾಯಚೂರಿನ ಕೃಷಿ ವಿಶ್ವವಿದ್ಯಾಲಯದಲ್ಲಿ "ಯುವಕರು ಹಾಗೂ ಸಹಕಾರಿ" ಕುರಿತಾದ ಸಂವಾದ ಕಾರ್ಯಕ್ರಮವನ್ನು 07–12–2015ರಂದು ಆಯೋಜಿಸಲಾಗಿದೆ.

**ತರಬೇತಿ ಕಾರ್ಯಕ್ರಮ :** ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಿಗಾಗಿ 2 ದಿನಗಳ ತರಬೇತಿ ಕಾರ್ಯಕ್ರಮ.

**ತರಬೇತಿ ಕಾರ್ಯಕ್ರಮ :** ಸೌಹಾರ್ದ ಸಹಕಾರಿ ಬ್ಯಾಂಕುಗಳ ಪದಾಧಿಕಾರಿಗಳಿಗಾಗಿ 2 ದಿನಗಳ ತರಬೇತಿ ಕಾರ್ಯಕ್ರಮ.

**ವಾರ್ಷಿಕ ಸಭೆ :** ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ವಾರ್ಷಿಕ ಸಭೆಯನ್ನು ಜಿಲ್ಲಾವಾರು ನಡೆಸಲು ತೀರ್ಮಾನಿಸಲಾಗಿದೆ. ಸ್ಥಳ ಮತ್ತು ದಿನಾಂಕಗಳನ್ನು ಸುತ್ತೋಲೆ ಮೂಲಕ ತಿಳಿಸಲಾಗುವುದು.

# ಸೌಹಾರ್ದ ಸಹಕಾರಿಗಳಿಗೆ ಬದಲಾಗುತ್ತಿರುವ ವ್ಯವಹಾರ ಮಾರುಕಟ್ಟೆಯ ಜ್ಞಾನದ ಮಹತ್ವ

▶▶ ಶ್ರೀ ವಿಜಯ್ ಬಿ.ಎಸ್., ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಕಲಬುರಗಿ ವಿಭಾಗ

ಸಹಕಾರಿಗಳು ಇಂದು ಕೇವಲ ಸಾಲ ನೀಡುವ ಮತ್ತು ತೆಗೆದುಕೊಳ್ಳುವ ಚಟುವಟಿಕೆಗಳಿಗೆ ಮಾತ್ರ ಸೀಮಿತವಾಗಿರದೇ, ಮುಂದುವರೆದು ಹಲವಾರು ವಿವಿಧ ರೀತಿಯ ಆದಾಯವನ್ನು ತರುವಂತಹ ಚಟುವಟಿಕೆಗಳನ್ನು ನಡೆಸುತ್ತಾ, ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳುತ್ತಿರುವುದು ಉತ್ತಮ ಬೆಳವಣಿಗೆಯೇ ಆಗಿರುತ್ತದೆ. ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಗುರುನಾಥ ಜಾಂತಿಕರರವರು ಹೇಳುವಂತೆ Co-operative is a Business Organisation, But with Social Commitment's ಅಂದರೆ, ಸಹಕಾರಿ ಸಂಸ್ಥೆಗಳು ಹಣಕಾಸಿನ ವ್ಯವಹಾರ ನಡೆಸುವ ಸಂಸ್ಥೆಗಳಾಗಿವೆ. ಆದರೆ, ಅವು ಸಾಮಾಜಿಕ ಜವಾಬ್ದಾರಿಯನ್ನು ಅರಿತು, ಆ ಮೂಲಕ ತನ್ನ ವ್ಯವಹಾರವನ್ನು ನಡೆಸುತ್ತಿರುತ್ತವೆ. ಇಂತಹ ಸಮಯದಲ್ಲಿ ಸಹಕಾರಿಗಳು ಮಾರುಕಟ್ಟೆಯಲ್ಲಿ ಆಗುತ್ತಿರುವ ಬದಲಾವಣೆಗಳ ಬಗ್ಗೆ ಗಮನ ಹರಿಸಲೇಬೇಕಾಗುತ್ತದೆ. ಕಾರಣ ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಸೇವಾ ವಲಯದಲ್ಲಿ ಆಗುತ್ತಿರುವ ಬದಲಾವಣೆಗೆ ತಕ್ಕಂತೆ ತಾವುಗಳು ಬದಲಾವಣೆ ಆಗಬೇಕಾಗಿರುವಂತಹ ಅನಿವಾರ್ಯತೆ.

ಮಾರುಕಟ್ಟೆ ಎಂದರೆ ಕೇವಲ ವಸ್ತುಗಳ ವಿನಿಮಯವೆಂದಲ್ಲ. ಹಣಕಾಸಿನ ವ್ಯವಹಾರವನ್ನು ನಡೆಸುವ ಸಂಸ್ಥೆಗಳಲ್ಲಿ ನೀಡುವ ಪ್ರತಿಯೊಂದು ಸೇವೆಗಳನ್ನು ಒಂದು ವಸ್ತು ಎಂದೇ ಪರಿಗಣಿಸಲಾಗುತ್ತದೆ. ಹಾಗಾಗಿ ಈ ಸೇವೆ ಅಥವಾ ವಸ್ತುವನ್ನು ತನ್ನ ಸದಸ್ಯರಿಗೆ/ ಜನರಿಗೆ ನೀಡುವಾಗ ಅವರ ಅಗತ್ಯತೆಯನ್ನು ಅರಿಯಬೇಕಾಗುವುದರ ಜೊತೆಗೆ ಬೇರೆ ಸಂಸ್ಥೆ/ ಹಣಕಾಸಿನ ವ್ಯವಹಾರ ನಡೆಸುತ್ತಿರುವ ಸಂಸ್ಥೆಗಳಿಗಿಂತ ಭಿನ್ನವಾದ ಸೇವೆಗಳನ್ನು ನೀಡಬೇಕಾಗುತ್ತದೆ. ಇಂತಹ ಸಮಯದಲ್ಲಿ ಮಾರುಕಟ್ಟೆಯ ನಡವಳಿಕೆಯ (Market Behaviour) ಬಗ್ಗೆ ಸ್ವಲ್ಪಮಟ್ಟಿಗಾದರೂ ಅರಿವಿರಬೇಕಾಗುತ್ತದೆ. ಸಹಕಾರಿಯಲ್ಲಿ ಯಾವುದೇ ಸೇವೆಯನ್ನು ಆರಂಭಿಸುವ ಮೊದಲು ಕೆಲವೊಂದು ಹಂತಗಳ ಮೂಲಕ ಮಾರುಕಟ್ಟೆಯ ಗುಣ ಲಕ್ಷಣಗಳನ್ನು ಅಂದಾಜಿಸಬೇಕಾಗುತ್ತದೆ.

ಈ ಮೊದಲೇ ಹೇಳಿದಂತೆ ಸೇವೆಗಳನ್ನು ಕೂಡ ವಸ್ತುವೆಂದೇ ಪರಿಗಣಿಸಬೇಕಾಗುತ್ತದೆ. ಹಾಗಾಗಿ, ಸಹಕಾರಿಯ ಆಡಳಿತ ಮಂಡಲಿಯು ಇಂದಿನ ಸ್ಪರ್ಧಾತ್ಮಕ ಯುಗಕ್ಕೆ ಅನುಗುಣವಾಗಿ




ಸೇವೆಗಳನ್ನು ಸಿದ್ಧಪಡಿಸಬೇಕಾಗುತ್ತದೆ. ಕಾರಣ ಪ್ರತಿ ದಿನವು ಒಂದಲ್ಲೊಂದು ಹೊಸ ಸೇವೆಗಳು ನಿಮ್ಮ ಪ್ರತಿಸ್ಪರ್ಧಿಗಳಿಂದ ಮಾರುಕಟ್ಟೆ ಪ್ರವೇಶಿಸುತ್ತಿರುತ್ತವೆ. ಆದರಿಂದ, ನಿಮ್ಮ ಪ್ರತಿಸ್ಪರ್ಧಿಗಳನ್ನು ಗಮನದಲ್ಲಿಟುಕೊಂಡು ಯಾವುದೇ ಹೊಸ ಸೇವೆಗಳ ರೂಪು ರೇಷೆಗಳನ್ನು ಸಿದ್ಧಪಡಿಸಿಕೊಳ್ಳ ಬೇಕಾಗುತ್ತದೆ. ಅಂದರೆ, ತಾವು ನೀಡಲಿರುವ ಸೇವೆಯು ತನ್ನ ಸದಸ್ಯರ ಅಥವಾ ಗ್ರಾಹಕರಿಗೆ ತಲುಪುವಂತಿರಬೇಕು ಹಾಗೂ ಇತರರಿಗಿಂತ ಭಿನ್ನವಾಗಿರುವಂತಹದನ್ನು ಆಯ್ಕೆ ಮಾಡಬೇಕು.

ವಸ್ತುವನ್ನು ಅಥವಾ ಸೇವೆಯನ್ನು ಆಯ್ಕೆ ಮಾಡಿದ ನಂತರ ಆ ಸೇವೆ ಅಥವಾ ವಸ್ತುವಿಗೆ ಎಷ್ಟು ಬೆಲೆ ನಿಗದಿಪಡಿಸಬೇಕು ಎಂಬುದನ್ನು ನಿರ್ಧರಿಸಬೇಕಾಗುತ್ತದೆ. ಒಂದು ವೇಳೆ, ಹಣಕಾಸಿನ ಸೇವೆಗಳನ್ನು ಒದಗಿಸುತ್ತಿದ್ದರೆ, ಆ ಸೇವೆಯನ್ನು ನಿಮ್ಮ ಸದಸ್ಯರಿಗೆ ನೀಡಿದ್ದಕ್ಕಾಗಿ ಅವರಿಂದ ಸಹಕಾರಿಯು ಪಡೆಯುವ ಹಣದ ರೂಪದ ಮೌಲ್ಯವಾಗಿರುತ್ತದೆ. ಬೆಲೆ/ ಬಡ್ಡಿ ನಿರ್ಧರಿಸುವಾಗ ಅತ್ಯಂತ ಜಾಗರೂಕತೆಯಿಂದ ನಿರ್ಧರಿಸಬೇಕಾಗುತ್ತದೆ. ತಾವುಗಳು ಗಮನಿಸಿರಬಹುದು, ಹಿಂದೆ ಜನಗಳೇ ಸಹಕಾರಿಗೆ ಭೇಟಿ ನೀಡಿ, ಸದಸ್ಯರಾಗುತ್ತಿದ್ದರು. ಆದರೆ, ಇಂದು ಕಾಲ ಸಂಪೂರ್ಣ ಬದಲಾಗಿದೆ. ನೀವೇ ಜನರ ಬಳಿ ಹೋದರೂ ಸದಸ್ಯರಾಗಲು ಯೋಚಿಸುತ್ತಿದ್ದಾರೆ ಹಾಗೂ ಬುದ್ಧಿವಂತಿಕೆಯಿಂದ ತನಗೆ ಯಾವುದು ಸರಿ ಎನಿಸುತ್ತದೆಯೋ ಅದನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾನೆ. ಇದರ ಅರ್ಥ ಜನರಿಗೆ ಆಯ್ಕೆ ಮಾಡಲು ಹಲವಾರು ಅವಕಾಶ

ಗಳಿರುವುದರಿಂದ ಬೆಲೆ ಅಥವಾ ಬಡ್ಡಿಯನ್ನು ನಿರ್ಧರಿಸುವಾಗ ತಮ್ಮ ಸುತ್ತಮುತ್ತಲಿನ ಪ್ರತಿಸ್ಪರ್ಧಿಗಳ ದರವನ್ನು ಗಮನದಲ್ಲಿಟ್ಟುಕೊಳ್ಳುವುದು ಅತಿಮುಖ್ಯ. ಹೀಗೆ ದರವನ್ನು ನಿಗದಿಪಡಿಸಿದ ನಂತರ ನೀವು ಅಗತ್ಯವಾಗಿ ಕೈಗೂಳ್ಳಲೇಬೇಕಾದ ಮುಖ್ಯ ಕಾರ್ಯವೆಂದರೆ, ಪ್ರಚಾರ ನೀಡುವುದು. ಪ್ರಚಾರ ಸಹಕಾರಿಯ ಬೆಳವಣಿಯಲ್ಲಿ ಅತಿ ಮುಖ್ಯ ಪಾತ್ರವನ್ನು ವಹಿಸುತ್ತದೆ. ಪ್ರಚಾರ ನಿಮ್ಮಲ್ಲಿರುವ ಹಾಗೂ ನೀವು ನೀಡುತ್ತಿರುವ ಸೌಲಭ್ಯಗಳ ಕುರಿತು ಜನರಿಗೆ ತಿಳಿಸುವ ಕಾರ್ಯವನ್ನು ಮಾಡುತ್ತದೆ.

ಪ್ರಚಾರದಿಂದ ಸಮಾಜದ ಕಡೆಯ ವ್ಯಕ್ತಿಗೂ ಕೂಡ ನೀವು ನೀಡಲಿರುವ ಸೌಲಭ್ಯಗಳ ಕುರಿತು ತಿಳಿಸುತ್ತದೆ. ಆದರೆ, ಅತ್ಯಂತ ವಿಷಾದನೀಯ ಸಂಗತಿಯೆಂದರೆ, ಸಹಕಾರಿಗಳು ಪ್ರಚಾರದ ಬಗ್ಗೆ ಹಾಗೂ ಅದರಿಂದಾಗುವ ಅನುಕೂಲತೆಯ ಬಗ್ಗೆಯಾಗಲಿ ಹೆಚ್ಚಾಗಿ ಗಮನಹರಿಸಿಸುತ್ತಿಲ್ಲ.

ಕಾರಣ ಸಹಕಾರಿಗಳ ದೃಷ್ಠಿಯಲ್ಲಿ ಪ್ರಚಾರ ನೀಡುವುದು ಸಹಕಾರಿಗೆ ಅನಗತ್ಯ ವೆಚ್ಚವೆಂದು ಪರಿಗಣಿಸುತ್ತಿವೆ. ಆದರೆ, ಪ್ರಚಾರ ಸಹಕಾರಿಗಳಿಗೆ ದೀರ್ಘಾವಧಿಯಲ್ಲಿ ಆದಾಯವನ್ನು ತಂದುಕೊಡುತ್ತವೆ. ಕಾರಣ ಸಹಕಾರಿಯು ಸಮಾಜದಲ್ಲಿ ತನ್ನ ಅಸ್ತಿತ್ವವನ್ನು ಕಂಡುಕೊಂಡಿರುತ್ತದೆ. ಹಾಗಾಗಿ, ಸಮಾಜದಲ್ಲಿರುವ ಎಲ್ಲಾ ಜನರಿಗೂ ಇದರ ಬಗ್ಗೆ ಮಾಹಿತಿ ಇರಬೇಕಾಗುತ್ತದೆ. ಇಂತಹ ಕೆಲಸವನ್ನು ಪ್ರಚಾರಗಳು ಮಾಡುತ್ತದೆ. ಆದರೆ, ಕೆಲವೊಂದು ಸನ್ನಿವೇಶಗಳಲ್ಲಿ ಸಹಕಾರಿ ಒಂದು ಉತ್ತಮ ಸೇವೆಯನ್ನು ಆಯ್ಕೆ ಮಾಡಿಕೊಂಡರೂ, ಇತರರಿಗಿಂತ ಕಡಿಮೆ ಬಡ್ಡಿದರ ನಿಗದಿಪಡಿಸಿ, ಉತ್ತಮ ಪ್ರಚಾರ ನೀಡಿದರೂ ಕೂಡ ಕೆಲವೊಮ್ಮೆ ಅದು ತನ್ನ ಸದಸ್ಯರಿಗೆ/ ಗ್ರಾಹಕರಿಗೆ ತಲುಪಲು ವಿಫಲವಾಗುತ್ತದೆ.

ಕಾರಣ ಈ ಎಲ್ಲಾ ವ್ಯವಹಾರವನ್ನು ನಡೆಸಲು ಅದು ಆಯ್ಕೆ ಮಾಡಿಕೊಂಡ ಸ್ಥಳ. ಸಹಕಾರಿಯು ತನ್ನ ಸದಸ್ಯರಿಗೆ ಸುಲಭದಲ್ಲಿ ಸಿಗುವಂತಿರಬೇಕು, ಸಾಧ್ಯವಾದ ಮಟ್ಟಿಗೆ ಸಹಕಾರಿಯಲ್ಲಿ ಉತ್ತಮವಾದ ಸಹಕಾರಿಯ ವಾತಾವರಣವಿರುವಂತೆ ಹಾಗೂ ತನ್ನ ಗ್ರಾಹಕರೊಂದಿಗೆ ವ್ಯವಹರಿಸುವಾಗ ಸೌಮ್ಯ ಸ್ವಭಾವದಿಂದ ಅವರ ಅಗತ್ಯತೆಯನ್ನು ಅರಿತು ಅವರಿಗೆ ಸೇವೆ ನೀಡಿದರೆ, ಖಂಡಿತವಾಗಿಯೂ ಆ ಒಬ್ಬ ಸದಸ್ಯ ಇನ್ನೂ ಇಬ್ಬರನ್ನು ಸಹಕಾರಿಗೆ ಕರೆತರುತ್ತಾನೆ.

ಜನರಿಂದ ಜನರಿಗೆ ನಿಮ್ಮ ಸಹಕಾರಿಯ ಬಗ್ಗೆ ಉತ್ತಮ ಅಭಿಪ್ರಾಯ ವ್ಯಕ್ತವಾದರೆ ಅದಕ್ಕಿಂತ ಬೇರೆ ಪ್ರಚಾರ ಬೇಕಾಗಿರುವುದಿಲ್ಲ. Don't Build Link's, Build Relationship With Your Members. ಆದುದರಿಂದ ಸಹಕಾರಿಗಳು ಹಳೆಯ ವ್ಯವಸ್ಥೆಯಿಂದ ಹೊರಬಂದು ಬದಲಾದ ಪರಿಸ್ಥಿತಿಗೆ ತಕ್ಕಂತೆ ಬದಲಾವಣೆ ಹೊಂದಿದರೆ ಯಾವುದೇ ಸಹಕಾರಿಯಾಗಲಿ ನಷ್ಟದಿಂದ ಹೊರಬರಲು ಸಾಧ್ಯವಾಗುತ್ತದೆ. ಆ ಮೂಲಕ ಸಹಕಾರಿಯ ಉದ್ದೇಶವನ್ನು ಈಡೇರಿಸಿದಂತಾಗುತ್ತದೆ, ಅಲ್ಲವೇ?

## ನವಕಲ್ಯಾಣ ಕರ್ನಾಟಕ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ನಿ., : 3ನೇ ಸರ್ವ ಸದಸ್ಯರ ಸಾಮಾನ್ಯ ಸಭೆ

ನವಕಲ್ಯಾಣ ಕರ್ನಾಟಕ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ನಿ., ಬೆಂಗಳೂರು ಸಹಕಾರಿಯ 2014–15ನೇ ಸಾಲಿನ 3ನೇ ಸರ್ವ ಸದಸ್ಯರ ಸಾಮಾನ್ಯ ಸಭೆಯು ಸಹಕಾರಿಯ ಅಧ್ಯಕ್ಷರಾದ ಶ್ರೀ ವಿ.ಬಿ.ಪಾಟೀಲ್ ಇವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಇಂಜಿನಿಯರ್ ಅಕಾಡೆಮಿ, ಬಸವೇಶ್ವರನಗರ, ಬೆಂಗಳೂರು ಇದರ ಸಭಾಂಗಣದಲ್ಲಿ ನೆರವೇರಿತು. ಸದರಿ ಸಾಮಾನ್ಯ ಸಭೆಯಲ್ಲಿ 217 ಸದಸ್ಯರು ಭಾಗವಹಿಸಿದ್ದರು.

ಸಭೆಯ ಕಾರ್ಯಸೂಚಿಯಂತೆ ಸಭೆ ನಡೆದು, 2014–15ನೇ ಸಾಲಿನ ಆಡಳಿತ ಮಂಡಲಿ ವರದಿ ಹಾಗೂ ಲೆಕ್ಕಪರಿಶೋಧಕರಿಂದ ಪರಿಶೀಲಿಸಲ್ಪಟ್ಟ ಲೆಕ್ಕ ಪತ್ರಗಳ ಅನುಮೋದನೆ ಹಾಗೂ ವರದಿ ಸಾಲಿನ ನಿವ್ವಳ ಲಾಭ ರೂ. 27.25 ಲಕ್ಷಗಳನ್ನು ವಿಲೇವಾರಿ ನಂತರ, ವರದಿ ಸಾಲಿಗೆ ಶೇಕಡ 10 ರಷ್ಟು ಡಿವಿಡೆಂಡನ್ನು ಸದಸ್ಯರಿಗೆ ವಿತರಿಸಲು ತೀರ್ಮಾನಿಸಲಾಯಿತು. ಸಾಮಾನ್ಯ ಸಭೆಗೆ ಮುಖ್ಯ ಅತಿಥಿಯಾಗಿ



ಆಗಮಿಸಿದ್ದ ಶ್ರೀ ಕೊಂಡಜ್ಜಿ ಷಣ್ಮುಖಪ್ಪ, ನಿವೃತ್ತ ಮುಖ್ಯ ಪ್ರಧಾನ ವ್ಯವಸ್ಥಾಪಕರು, ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಹಾಗೂ ನಿಕಟ ಪೂರ್ವ ರಾಜ್ಯ ಆಯುಕ್ತರು, ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಇವರು ಸಹಕಾರಿಯ ಹೊಸ "ಮಕ್ಕಳ ವಿಕಾಸ ಠೇವಣಿ" ಯೋಜನೆಯನ್ನು ಉದ್ಘಾಟಿಸಿದರು.



# RBI NEWS - OCTOBER 2015

K.Vittal Shetty



**The fifth bi-monthly monetary policy statement will be announced on December 1, 2015.**

| Policy Rates with effect from 29 September 2015 | % |
|---|---|
| POLICY REPO RATE | 6.75% |
| REVERSE REPO RATE | 5.75% |
| MARGINAL STANDING FACILITY RATE | 7.75% |
| BANK RATE | 7.75% |
| Reserve Ratios | % |
| Cash Reserve Ratio | 4% |
| Statutory Reserve Ratio w.e.f. February 7.2015 | 21.5% |

## IMPORTANT NEWS

RBI issues direction on implementation of Gold Monetisation Scheme (GMS), 2015

The Reserve Bank of India issued a Direction to all Scheduled Commercial Banks (excluding Regional Rural Banks) on implementation of the Gold Monetisation Scheme, 2015 notified by the Central Government on October 22,2015.

### The Scheme

**The GMS will replace the existing Gold Deposit Scheme, 1999.** However, the deposits outstanding under the Gold Deposit Scheme will be allowed to run till maturity unless the depositors prematurely withdraw them.

Resident Indians (Individuals, HUF, Trusts including Mutual Funds/Exchange Traded Funds registered under SEBI (Mutual Fund) Regulations and Companies) can make deposits under the scheme.

The minimum deposit at any one time shall be raw gold (bars, coins, jewellery excluding stones and other metals) equivalent to 30 grams of gold of 995 fineness. There is no maximum limit for deposit under the scheme. The gold will be accepted at the Collection and Purity Testing Centres (CPTC) certified by Bureau of Indian Standards (BIS) and notified by the Central Government under the Scheme. The deposit certificates will be issued by banks in equivalence of 995 fineness of gold.

The principal and interest of the deposit under the scheme will be denominated in gold.

The designated banks will accept gold deposits under the Short Term (1-3 years) Bank Deposit (STBD) as well as Medium (5-7 years) and Long (12-15 years) Term Government Deposit Schemes. While the former will be accepted by banks on their own account, the latter will be on behalf of Government of India. There will be provision for premature withdrawal subject to a minimum lock-in period and penalty to be determined by individual banks.

Interest on deposits under the scheme will start accruing from the date of conversion of gold deposited into tradable gold bars after refinement or 30 days after the receipt of gold at the CPTC or the bank's designated branch, as the case may be and whichever is earlier.

During the period from the date of receipt of gold by the CPTC or the designated branch, as the case may be, to the date on which interest starts accruing in the deposit, the gold accepted by the CPTC or the designated branch of the bank shall be treated as an item in safe custody held by the designated bank.

**Reserve requirements :** The short term bank deposits will attract applicable cash reserve ratio (CRR) and statutory liquidity ratio (SLR). However, the stock of gold held by the banks will count towards the general SLR requirement.

**KYC to apply :** The opening of gold deposit accounts will be subject to the same rules with regard to customer identification as are applicable to any other deposit account.

**Utilisation of gold mobilised under GMS :** The designated banks may sell or lend the gold accepted under STBD to MMTC for minting India Gold Coins (IGC) and to jewellers, or sell it to other designated banks participating in GMS. The gold deposited under MLTGD will be auctioned by MMTC

ಸ್ವಾಭಿಮಾನಿ ಸಹಕಾರಿ

Swabhimani Sahakari, Monthly, Posting Day 8th.
Posted at Bangalore PSO, Mysore Road, Bangalore 560026
Registered No. RNP/BGW/1744/2014-16. RNI No. KARBIL - 2004/18001. Pages 28



or any other agency authorised by the Central Government and the sale proceeds credited to the Central Government's account with the Reserve Bank.

The entities participating in the auction may include the Reserve Bank, MMTC, banks and any other entities notified by the Central Government. Banks may utilise the gold purchased in the auction for purposes indicated above.

**Risk Management :** Designated banks should put in place a suitable risk management mechanism, including appropriate limits, to manage the risk arising from gold price movements in respect of their net exposure to gold. For this purpose, they have been allowed to access the international exchanges, London Bullion Market Association or make use of over-the-counter contracts to hedge exposures to bullion prices subject to the guidelines issued by the Reserve Bank.

**Grievance redress :** Complaints against designated banks regarding any discrepancy in issuance of receipts and deposit certificates, redemption of deposits, payment of interest will be handled first by the bank's grievance redress process and then by the Reserve Bank's Banking Ombudsman.

It may be recalled that the Government of India announced the Gold Monetisation Scheme vide its Office Memorandum F.No.20/6/2015-FT dated September 15, 2015. The objective of the Scheme is to mobilise gold held by households and institutions of the country and facilitate its use for productive purposes, and in the long run, to reduce country's reliance on the import of gold.

**The exact date of implementation will be announced by RBI in the next few days.**

**Cancellation, Withdrawl, Penalties and Directions on Urban Co-operative Banks.**

for more information visit : www.rbi.org.in

## ಅವಿಶ್ವಾಸ ನಿರ್ಣಯಕ್ಕೆ ಅವಕಾಶ - ಸುಪ್ರೀಂ ಕೋರ್ಟ್ ತೀರ್ಪು



ಇದೇ ಮಾರ್ಚ್ 19, 2015 ರಂದು ವಿಘುಲಭಾಯಿ ಎಂ. ಚೌಧರಿಯವರು ಮತ್ತು ಗುಜರಾತ್ ಹಾಲು ಮಾರಾಟ ಮಹಾಮಂಡಳಿ ಮತ್ತು ಇತರರು ವಿಷಯದಲ್ಲಿ ಸುಪ್ರೀಂ ಕೋರ್ಟ್ ಇಡೀ ದೇಶದ ಸಹಕಾರಿಗಳಿಗೆ ಅನ್ವಯವಾಗುವಂತೆ ಸಹಕಾರಿ ಸಂಸ್ಥೆಗಳಲ್ಲಿ ಪದಾಧಿಕಾರಿಗಳಿಗೆ ಅವಿಶ್ವಾಸ ನಿರ್ಣಯ ಅವಕಾಶ ಸಾಧುವೆಂದು ಮಹತ್ವದ ತೀರ್ಪು ನೀಡಿದೆ. ಒಂದು ಸಹಕಾರಿ ಸಂಸ್ಥೆಯ ಅಧ್ಯಕ್ಷ, ಉಪಾಧ್ಯಕ್ಷ ಅಥವಾ ಯಾವುದೇ ಗೌರವ ಹುದ್ದೆಯನ್ನು ಹೊಂದಿದ ಸಹಕಾರಿಗಳ ಮೇಲೆ ಅವನು ಆಯ್ಕೆಯಾದ 2 ವರ್ಷದ ಅವಧಿಯ ನಂತರ ಅವಿಶ್ವಾಸ ನಿರ್ಣಯ ಮಂಡಿಸಬಹುದು. ಒಮ್ಮೆ ಅವಿಶ್ವಾಸ ನಿರ್ಣಯ ಮಂಡಿಸಿದ ನಂತರ ಮತ್ತೊಮ್ಮೆ ಅವಿಶ್ವಾಸ ನಿರ್ಣಯ ಮಂಡಿಸಲು 1 ವರ್ಷದ ಅವಧಿಯ ಅಂತರವಿರಬೇಕು ಎಂದು ಹೇಳಿದೆ.

ಅಂತರರಾಷ್ಟ್ರೀಯ ಸಹಕಾರಿ ಮೈತ್ರಿ ಸಂಸ್ಥೆಯಿಂದ ರೂಪಿತ ಸಹಕಾರ ತತ್ವಗಳ ಅನುಷ್ಠಾನ, ಸಹಕಾರ ಸಂಸ್ಥೆಯ ವ್ಯಾಖ್ಯಾನ, ಕೇಂದ್ರ ಸರಕಾರ 2002ರಲ್ಲಿ ನಿರೂಪಿಸಿದ ರಾಷ್ಟ್ರೀಯ ಸಹಕಾರ ನೀತಿಯು ಸಹಕಾರಿ ಸಂಸ್ಥೆಗಳು ಪ್ರಜಾಪ್ರಭುತ್ವದಡಿಯಲ್ಲಿ ಕಾರ್ಯನಿರ್ವಹಿಸುತ್ತವೆ ಎಂಬ ವಿಷಯ, 97ನೇ ಸಂವಿಧಾನ ತಿದ್ದುಪಡಿಯ ನಂತರ ಸಹಕಾರ ಸಂಸ್ಥೆಗಳಿಗೆ ಸಂವಿಧಾನಾತ್ಮಕ ಮಾನ್ಯತೆ ಇರುವುದರಿಂದ, ಇದು ಸಂವಿಧಾನಾತ್ಮಕ ಅಗತ್ಯವಾಗಿರುವ ವಿಷಯವಾಗಿರುವುದರಿಂದ, ಪ್ರಜಾಸತ್ತಾತ್ಮ ನೀತಿ ನಿಯಮಗಳಿಗೆ ಮಾನ್ಯತೆಯ ಅವಶ್ಯಕತೆ, ಪ್ರಜಾಪ್ರಭುತ್ವವು ಉತ್ತರದಾಯಿತ್ವವನ್ನು ಹೊಂದಿರಬೇಕಾಗುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿಶ್ವಾಸಾರ್ಹತೆಯನ್ನು ಹೊಂದಿ, ಕೆಲಸನಿರ್ವಹಿಸುವುದು ಅಗತ್ಯವೆಂದು ಹೇಳಿ ಸಹಕಾರಿ ಸಂಸ್ಥೆಗಳಲ್ಲಿ ಪದಾಧಿಕಾರಿಗಳ ಮೇಲೆ ಅವಿಶ್ವಾಸ ನಿರ್ಣಯ ಅಗತ್ಯವೆಂದು ತೀರ್ಪಿನಲ್ಲಿ ಹೇಳಿದೆ.

ಬೆಂಗಳೂರು ವಿಭಾಗೀಯ ಕಛೇರಿ : ನಂ. 141, 1ನೇ ಮೈನ್,1ನೇ ಕ್ರಾಸ್, ಡಾ.ರಾಜ್‌ಕುಮಾರ ರಸ್ತೆ, 1-ಕೆ ಬ್ಲಾಕ್, ರಾಜಾಜಿನಗರ, ಬೆಂಗಳೂರು.560 010. ದೂ: 080 – 23525546
ಮೈಸೂರು ವಿಭಾಗೀಯ ಕಛೇರಿ : ನಂ. 200, ಶಂಕರ ಮಠ ಮುಖ್ಯರಸ್ತೆ, ಕಿಲ್ಲೇ ಮೊಹಲ್ಲಾ, ಮೈಸೂರು. ದೂ : 0821 – 2332299
ಬೆಳಗಾವಿ ವಿಭಾಗೀಯ ಕಛೇರಿ : ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂ : 0831 – 2401551
ಕಲಬುರಗಿ ವಿಭಾಗೀಯ ಕಛೇರಿಯ : ನಂ. 1–4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ ಗಾರ್ಡನ್ ರಸ್ತೆ, ಕಲಬುರಗಿ – 585102. ದೂ. 08472 – 270222.

Edited, Printed and Published by Sharangouda G. Patil – Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010